ಕನ್ನಡ ಜೈಮಿನಿ ಭಾರತ

ಹದಿನೆಂಟನೆಯ ಸಂಧಿ

———:೦:———

ಸೂ ॥ ಸಾಮ್ರಾಜ್ಯಮಂ ತಾಳ್ದಿಸೆವ ರಾಘವೇಂದ್ರನಿಂ ।
ದಾಮ್ರಪ್ರವಾಳದಂತಿರೆ ವಿರಾಜಿಸುತಿರ್ಪ ।
ತಾಮ್ರಾಧರೆಯರ ಸೀಮಂತಮಣಿ ಸೀತಾರಮಣಿ ಗರ್ಭಮಂ ತಾಳ್ದಳು ।

ಭೂಪಾಲ ಕೇಳಾದೊಡಿನ್ನು ಪೂರ್ವದೊಳವನಿ ।
ಜಾಪತಿಯ ಕುಶಲವರ ಸಂಗರದ ಕೌತುಕವ ।
ನಾಪನಿತನೊರೆವೆನಿಕ್ಷ್ವಾಕು ಮೊದಲಾದ ರವಿಕುಲದ ನೃಪರೇಳ್ಗೆಗಳನು ॥
ವ್ಯಾಪಿಸಿದ ಸಂಪದಕೆ ನೆಲೆವನೆಯೆನಿಪ್ಪಯೋ ।
ಧ್ಯಾಪುರದೊಳವತರಿಸಿದಂ ಮಹಾವಿಷ್ಣು ಸುತ ।
ರೂಪದಿಂ ರಾಮಾಭಿಧಾನದೊಳ್ ಪುತ್ರಕಾಮೇಷ್ಟಿಯಿಂ ದಶರಥಂಗೆ ॥ ೧ ॥

ತೊಳೆದು ಜನನಿಯ ಜಠರಮಂ ಜನಿಸಿ ಭವನದೊಳ್ ।
ಬೆಳೆದು ಲಕ್ಷ್ಮಣ ಭರತ ಶತ್ರುಘ್ನರೊಡಗೂಡಿ ।
ತಳೆದು ಕೌಶಿಕನ ಮಖಮಂ ಕಾದು ತಾಟಕಿಯನೊರಸಿ ಮುನಿಸತಿಯಘವನು ॥
ಕಳೆದು ಮಿಥಿಲೆಗೆ ಪೋಗಿ ಭಾರ್ಗವನ ಗರ್ವಮಂ ।
ಸೆಳೆದು ಹರಚಾಪಮಂ ಮುರಿದೊಲಿಸಿ ಸೀತೆಯಂ ।
ತಳೆದುತ್ಸವದೊಳಯೋಧ್ಯಾಪುರಿಗೆ ದಶರಥನೊಡನೆ ರಾಘವಂ ಬಂದನು ॥ ೨ ॥

ವರ್ಧಿಪ ಕುಮಾರಂಗೆ ಭೂಮೀಶ್ವರಂ ಬಳಿಕ ।
ಮೂರ್ಧಾಭಿಷೇಚನಂ ಮಾಡಲನುಗೆಯ್ಯೆ ನೃಪ ॥
ನರ್ಧಾಂಗಿ ತಡೆಯೆ ಪೊರಮಟ್ಟು ಬನಕೈದೆ ನರಪತಿ ಪುತ್ರಶೋಕದಿಂದ ॥

ಸ್ವಧರ್ಮವುಕಡರಿ ಕೇಳುತ ಭರತನಂ ಕಳುಹಿ ।
ದುರ್ಧರದರಣ್ಯಪ್ರವೇಸಪುಂ ಮಾಡಿದಂ ।
ಸ್ಪರ್ಧಿಸುವ ದನುಜರಂ ಮುರಿದು ಮುನಿಗಳನೋವಿ ಸತಿಸಹಿತ
ಕಾಕುತ್ಸ್ಥನು ॥ ೩ ॥

ದಂಡಕಾರಣ್ಯದೊಳಿರಲ್ಕೆ ಶೂರ್ಪಣಖೆ ಬಂ ।
ದಂಡಲೆಯಲಾಕೆಯಂ ಭಂಗಿಸಿ ಖರಾದ್ಯರಂ ।
ಖಂಡಿಸಿ ಕನಕಮೃಗವ್ಯಾಜದಿಂದ್ಯೈದೆ ಲಕ್ಷ್ಮಣನಗಲೆ ಕಪಟದಿಂದ ॥

ಕೊಂಡೊಯ್ಯೆ ರಾವಣಂ ಸೀತೆಯಂ ಕಾಣದುರೆ ।
ಬೆಂಡಾಗಿ ವಿರಹದಿಂ ಬಿದ್ದಿಹ ಜಟಾಯುವಂ ।
ಕಂಡು ಹೊಲಬಂ ಕೇಳ್ದು ಸೌಮಿತ್ರಿಸಹಿತ ನಡೆದಂ ಮುಂದೆ
ರಘುನಾಥನು ॥ ೪ ॥

ಪಥದೊಳ್ ಕಬಂಧನಂ ಕೊಂದು ಶಬರಿಯ ಮನೋ ।
ರಥಮಂ ಸಲಿಸಿ ಕರುಣದಿಂದಾಂಜನೇಯನಂ ।
ಪ್ರಥಮದೊಳ್ ಕಂಡು ಸುಗ್ರೀವಂಗೆ ಕೈಗೊಟ್ಟು ವಾಲಿಯಂ ಬಾಣದಿಂದ ॥

ಮಥಿಸಿ ರಾವಣನ ಮೇಲಣ ರಾಜಕಾರಿಯದ ।
ಕಥನಕಾಳೋಚಿಸಿ ಕರೆದು ಕಪಿಗಳಂ ನೆರಪಿ ।
ಪೃಥಿವಿಜೆಯನರಸಲ್ಕೆ ವೀರಹನುಮಂತನಂ ಕಳುಹಿದಂ ಕಾಕುತ್ಸ್ಥನು ॥ ೫ ॥

ಧಿಂಕಿಟ್ಟು ಶರಧಿಯಂ ದಾಂಟಿ ಮೇದಿನಿಯ ಸುತೆ ।
ಗಂಕಿತದ ಮುದ್ರಿಕೆಯನಿತ್ತು ಬೀಳ್ಕೊಂಡು ನಿ ।
ಶ್ಶಂಕೆಯೊಳಶೋಕವನಮಂ ಕಿತ್ತು ದನುಜರಂ ಸದೆದಕ್ಷನಂ ಮರ್ದಿಸಿ ॥

ಅಂಕದೊಳ್ ಬಳಿಕ ಶಕ್ರಜಿತುವಿನುರುಬ್ರಹ್ಮಾಸ್ತ್ರ ।
ದಂಕೆಯಿಂ ನಿಂದು ವಾಲಧಿಗಿಕ್ಕಿದುರಿಯಿಂದ ।
ಲಂಕೆಯಂ ಸುಟ್ಟು ಬಂದೊಸಗೆವೇಳ್ದನಿಲಜನನಸುರಾರಿ ಮನ್ನಿಸಿದನು ॥ ೬ ॥

ಗಣನೆಯಿಲ್ಲದ ಕಪಿಗಳಂ ಕೂಡಿಕೊಂಡು ತೆಂ
ಕಣ ಕಡಲ ತೀರದೊಳ್ ಬಿಟ್ಟು ಬಂದೊಡೆ ವಿಭೀ ।
ಷಣನಂ ಪರಿಗ್ರಹಿಸಿ ಲಂಕಾಧಿಪತ್ಯಮಂ ಕೊಟ್ಟು ಜಲಧಿಯನೆ ಕಟ್ಟಿ ॥

ರಣದೊಳಸುರರ ಕುಲದ ಹೆಸರುಳಿಯದಂತೆ ರಾ ।
ವಣ ಕುಂಭಕರ್ಣ ಮೊದಲಾದ ರಕ್ಕಸರನುರೆ ।
ಹಣಿದವಾಡಿದನುರವಣಿಸಿ ಧೂಳಿಗೋಂಟೆಯಂ ಕೊಂಡನಾ
ರಘುವೀರನು || ೭ ||

ರಾವಣನ ಪದವಂ ವಿಭೀಷಣಂಗೊಲಿದಿತ್ತು ।
ದೇವರ್ಕಳಂ ಪೊರೆದು ಸೆರೆಯಿರ್ದ ಸೀತೆಯಂ ।
ಪಾವಕನ ಮುಖದಿಂ ಪರಿಗ್ರಹಿಸಿ ಮೂಜಗಂ ಮೆಚ್ಚೆ
ವಿಜಯೋತ್ಸವದೊಳು ||

ಭೂವರಂ ಸೌಮಿತ್ರಿ ದಶಮುಖಾವರಜ ಸು ।
ಗ್ರೀವಾದಿಗಳ ಗಡಣದಿಂದಯೋಧ್ಯಾಪುರಿಗೆ ।
ದೂವಾಳಿಸಿದನವ:ಲಮಣಿಪುಷ್ಪಕದ ಮೇಲೆ ಭರತನಂ ಪಾಲಿಸಲ್ಕೆ ॥ ೮ ॥

ವರ ಪುಷ್ಪಕವನಿಳಿದು ಭರತ ಶತ್ರುಘ್ನರಂ ।
ಕರುಣದಿಂ ತೆಗೆದಪ್ಪಿ ಕೌಶಿಕ ವಸಿಷ್ಠಾದಿ ।
ಗುರುಗಳಂ ಸತ್ಕರಿಸಿ ಕೈಕೆ ಮೊದಲಾಗಿರ್ದ ಮಾತೃಜನಕ್ಕೆರೆದೆ ನಮಿಸಿ ॥

ಅರಮನೆಯ ಸತಿಯರಂ ಸಚಿವರಂ ಪ್ರಜೆಗಳಂ ।
ಪರಿಜನಪ್ರಕೃತಿಗಳನಿರದೆ ಕಾಣಿಸಿಕೊಂಡು ।
ಬರವನೇ ಹಾರೈಸಿ ಕೃಶೆಯಾದ ಕೌಸಲೆಗೆ ರಾಮನಭಿವಂದಿಸಿದನು ॥ ೯ ॥

ಕಯ್ದುಳದೊಳೊಯ್ಯನೊಯ್ಯನೆ ಘನ ಸ್ನೇಹದಿಂ ।
ಮೆಯ್ದಡವಿ ತನಯನಂ ತಕ್ಕೈಸಿ ಮುಂಡಾಡಿ ।
ಕಯ್ದುಗಳ ಗಾಯಮಂ ಕಂಡು ಕರಗುತ ಮಗನೆ ನಿನ್ನ ಕೋಮಲ
ತನುವನು

ಪೊಯ್ದು ಪರದಾರಕಟ ಬಿಂದುವೆನ್ನೊಡಲೆಂದು ।
ಸುಯ್ದು ಮುಗ್ಧಾಭಾವದಿಂ ತನ್ನ ಸವತಿಯುಂ ।
ಬಯ್ದು ಮರುಗುವ ಮಾತೆಯುಂ ನೋಡಿ ನಗುತ ಸಂತೈಸಿದಂ
ರಾವಣಾರಿ ॥ ೧೦ ॥

ಮೇಲೆ ತಾಳ್ದಂ ಶುಭಮುಹೂರ್ತದೊಳ್ ವಾರಿಧಿಯ ।
ಮೇಲೆಯಿರ್ದವನಿಯುಂ ಪಟ್ಟಾಭಿಷೇಚನದ ।
ಕಾಲದೊಳ್ ಕಂಡರು ಸಮಸ್ತಮುನಿಗೀರ್ವಾಣವಾನರದನುಜ
ಮನುಜರು ॥

ಮೂಲೋಕವ್ಯೆದೆ ಕೊಂಡಾಡೆ ಬಳಿಕುರ್ವಿಯುಂ ।
ಪಾಲಿಸುತ್ತಿರ್ದನೊಂಬತ್ತು ಸಾಸಿರ ವರುಷ ।
ವೋಲೈಸಿದುದು ರಾಘವೇಂದ್ರನಂ ನಿಖಿಳ ಭೂಪತಿಚಯುಂ
ಪ್ರೀತಿಯಿಂದ ॥ ೧೧ ॥

ಯೂಪಮಯುವಾಯ್ತು ಧರೆಯೆಲ್ಲಮುಂ ವರಜಾತ ।
ರೂಪಮಯುವಾಯ್ತು ಮನೆಯೆಲ್ಲಮುಂ ಶುಕಪಿಕಾ ।
ಲಾಪಮಯುವಾಯ್ತು ವನವೆಲ್ಲಮುಂ ವರ್ಧಿಪ ಪ್ರಜೆಗಳಿಂ
ಸಂಚರಿಸುವ ॥

ಗೋಪಮಯುವಾಯ್ತು ಗಿರಿಯೆಲ್ಲಮುಂ ರತ್ನ ಪ್ರ ।
ದೀಪಮಯುವಾಯ್ತು ತಮಮೆಲ್ಲಮುಂ ರಘುಜ ಪ್ರ ।
ತಾಪಮಯುವಾಯ್ತು ಮೂಜಗಮೆಲ್ಲಮುಂ ದಾಶರಥಿ ರಾಜ್ಯಮಂ
ಪಾಲಿಸೆ ॥ ೧೨ ॥

ಪಣ್ಗಾಯಿ ಪೂ ತಳಿರ್ಬಿತ್ತ ತರು ಲತೆಗಳಿಲ್ಲ ।
ತಣ್ಗೊಳಂ ಕೆರೆ ಕಾಲ್ವೊಳೆಗಳಿಲ್ಲದಿಳೆಯಿಲ್ಲ ।
ಪೆಣ್ಗಂಡುಗಳೊಳೊರ್ವರುಂ ನಿಜಾಚಾರ ವಿರಹಿತರಾಗಿ ನಡೆವರಿಲ್ಲ ॥
ಬಿಣ್ಗೆಚ್ಚಲಿಕ್ಕೆ ಕೊಡವಾಲ್ಗರೆಯದಾವಿಲ್ಲ ।

ನುಣ್ಣಾಡಿವೆತ್ತಿರದ ಪಶು ಪಕ್ಷಿ ಮೃಗವಿಲ್ಲ ।
ಕಣ್ಗೊಳಿಪ ರಾಮ:ರಾಜ್ಯದೊಳಕಾಲಮರಣವಿಲ್ಲಖಿಳಜೀವಿಗಳ್ಗೆ ॥ ೧೩ ॥

ಕಾಳಿಂದಿ ಸುರನದಿಗೆ ಕೃಷ್ಣನಮೃತಾಬ್ಧಿಗಳ ।
ಕಾಳಿ ವಾಣಿಗೆ ಕಳಂಕಿಂದುಮಂಡಲಕೆ ವರ ।
ಕಾಳಿ ಕಾಪಾಲಿಗೆ ಮದಂ ದೇವಗಜಕೆ ನಂಜಹಿಪತಿಗೆ
ತೊಡವಾಗಿರೆ ॥

ಕಾಳಿಮದ ಕೂಟಮೆನಗಿಲ್ಲೆಂಬ ಮುಳಿಸತಿ ವಿ ।
ಕಾಳಿಸಲಮಲ ಕೀರ್ತಿಕಾಂತೆ ಪೊರಮಟ್ಟು ಲೋ ।
ಕಾಳಿಯಂ ತಿರುಗುವಳಿನಲ್ಕೆ ರಾಮನ ಯಶೋವಿಸ್ತರವನೇ
ವೊಗಳ್ವೆನು ॥ ೧೪ ॥

ಸರ್ವಸಂಪತ್ಸಮೃದ್ಧಿಗಳಿಂ ಸ್ವಧರ್ಮದಿಂ ।
ನಿರ್ವಿಘ್ನಮಾಗಿ ಸಕಲಪ್ರಕೃತಿಜಾತಿ ಚಾ ।
ತುರ್ವರ್ಣ್ಯಮಂ ಬಿಡದೆ ಪೊರೆವಲ್ಲಿ ನೀತಿಶಾಸ್ತ್ರಂಗಳ್ಗೆ ಪಳಿವೊರಿಸದೆ ॥

ಉರ್ವಿಯಂ ನವಸಹಸ್ರಾಬ್ದಮುರೆ ಪಾಲಿಸಿದ ।
ಸುರ್ವ ಸಂತಾನಮಂ ಕಾಣದಿಕ್ಷ್ವಾಕು ಕುಲ ।
ನಿರ್ವಾಹಮಂ ನೆನೆದು ರಘುವರಂ ನುಡಿದನೇಕಾಂತದಿಂ
ಜಾನಕಿಯೊಳು ॥ ೧೫ ॥

ಕಾಂತೆ ಕೇಳಿಕ್ಷ್ವಾಕುವಂಶಮೆನ್ನಲ್ಲಿ ಬಂ ।
ದಾಂತುದಿಲ್ಲಿಂದೆ ಸಂತತಿ ನಡೆಯದಿರ್ದೊಡೆ ಕು ।
ಲಾಂತಕಂ ತಾನಾದಪೆಂ ಸಾಕದಂತಿರಲಿ ಮನುಜರ್ಗೆ ಸಂಸಾರದ ॥

ಭ್ರಾಂತಿಯಂ ಬಿಡಿಸುವೊಡಪತ್ಯದೇಳ್ಗೆಗಳೆ ವಿ ।
ಶ್ರಾಂತಿಯಲ್ಲದೆ ಪೆರತದೇನುಂಟು ಮುಂದೆ ಪು ।
ತ್ರಾಂತರವನೈದದಿರ್ದಪೆನೆಂತೊ ಪೇಳೆಂದು ದಾಶರಥಿ
ಬಿಸುಸುಯ್ದನು ॥ ೧೬ ॥

ಸಂತಾನಮಂದಾರದೊಳ್ ಪಡೆದತುಳವಿಭವ ।
ಮಂ ತಳೆದು ನಂದನೋತ್ಸವದಮೃತಪಾನದ ।
ತ್ಯಂತ ಸೌಖ್ಯವನೈದಿ ದೇವೇಂದ್ರನಂತೆ ಸುಮ್ಮಾನವಾಗಿರದೆ ಬರಿದೆ ॥
ಸಂತತಂ ಜಾತರೂಪವನೆ ಕಾಣದೆ ತಾಪ ।
ದಿಂ ತೊಳಲಿ ಬಳಲುವ ದರಿದ್ರನಂದದೊಳೈದೆ ।
ಚಿಂತಿಸುವ ಸಂಸಾರವೇಕೆ ಮಾನವಜನ್ಮಕೆಂದು ರಘುಪತಿ
ನುಡಿದನು ॥ ೧೭ ॥

ನೀರಿರ್ದ ಕಾಸಾರಕರವಿಂದವಿಲ್ಲದೊಡೆ ।
ತಾರಕೆಗಳಿರ್ದ ಗಗನಕೆ ಚಂದ್ರನಿಲ್ಲದೊಡೆ ।
ಚಾರು ಯೌವನಮಿರ್ದ ಪೆಣ್ಗಿನಿಯನಿಲ್ಲದೊಡೆ ಸನ್ನುತಪ್ರಜೆಗಳಿರ್ದ ॥
ಧಾರಿಣಿಗೆ ಧರ್ಮದರಸಿಲ್ಲದೊಡೆ ಸಿರಿಯಿರ್ದ ।
ದಾರವಂಶಕೆ ಕುವರನಿಲ್ಲದೊಡೆ ಮೆರೆದಪುದೆ ।
ನಾರಿ ಪೇಳೆನೆ ಲಜ್ಜೆಯಿಂದ ತಲೆವಾಗಿ ನಿಜಪತಿಗೆ ಜಾನಕಿ
ನುಡಿದಳು ॥ ೧೮ ॥

ಕಾಂತ ನೀಂ ಪೇಳ್ದೊಡೇಂ ಪುತ್ರವತಿಯಹುದು ಜ ।
ನ್ಮಾಂತರವ ಪುಣ್ಯಮೈಸಲೆ ಪೆಣ್ಗೆ ಮುನ್ನ ತಾಂ ।
ನೋಂತುದಲ್ಲದೆ ಬಂದಪುದೆ ಬರಿದೆ ಬಯಸಿದೊಡೆ ಸುಕುಮಾರನಂ
ಪಡೆವುದು ॥
ಅಂತೊಳಗೆ ಪುದುಗಿರ್ದ ಪರಿಮಳದೊಳೊಪ್ಪುವ ಲ ।
ತಾಂತಕುಟ್ಮಲದಂತೆ ವರಗರ್ಭಲಾಂಛನದ ।
ಕಾಂತಿಯಿಂ ತಳೆವುದಂಗನೆಯರೆಲ್ಲರ್ಗೆ ದೊರೆವುದೆ
ಮೇದಿನಿಯೊಳೆಂದಳು ॥ ೧೯ ॥

ಕಂದನಾಡುವ ಬಾಲಲೀಲೆಯಂ ನೋಡಿ ತೊದ ।
ಲೊಂದಿದಿನಿವಾತನುರೆ ಕೇಳ್ದು ಮುದ್ದಿನ ಮುದ್ದೆ ।
ಯೆಂದೆಡಂಗವನೆತ್ತಿಕೊಂಡು ನಳಿದೋಳ್ಗಳಿಂದಪ್ಪಿ ಕೆಂಗುರುಳ್ಗಳೊಲೆವ ॥

ಮುಂದಲೆಯ ಕಂಪನಾಘ್ರಾಣಿಸಿ ತೊರೆದ ಜೊಲ್ಲ ।
ಚೆಂದುಟಿಯ ಬಾಯ್ದೆರೆಯನೈದೆ ಚುಂಬಿಸಿ ಸೊಗಸು ।
ಗುಂದದಾಯೆಂದು ಪಂಚೇಂದ್ರಿಯ ಪ್ರೀತಿಯಂ ಪಡೆವರಿನ್ನಾವ
ಕೃತರೋ ॥ ೨೦ ॥

ತೇಲ್ದೋಸರಿಸಿ ಮೇಲುದಂ ಸೆಳವ ಕಮಲಮಂ ।
ಪೋಲ್ದ ಕಣ್ಗೊನೆಯಿಂದ ತಾಯ ಮೊಗಮಂ ನೋಳ್ಪ ।
ಕಾಲ್ದುದಿಗಳಂ ಬಿದಿರಿ ತಡವರಿಸಿ ಕೈಯಿಡುವ ಬಾಲಂಗೆ ಮೋಹದಿಂದ ॥
ಜೋಲ್ದೊಲೆವ ಹಾರಮಂ ಸರಿದು ಮುಯ್ಪಿಗೆ ಸಾರ್ಚಿ ।
ಪಾಲ್ದೊರೆವ ಮೊಲೆಯನೂಡಿ ಕೂಡೆ ತೊಟ್ಟಿಲೊಳಿಟ್ಟು ।
ಸಾಲ್ವ ಸೈಪಿಂದ ಜೋಗುಳವಾಡಿ ತೂಗುವಳದೇಂ ಸುಕೃತೆಯೋ
ಧರೆಯೊಳು ॥ ೨೧ ॥

ಇಂತು ಸುತರಿಲ್ಲದಾಪರೊಳವರ್ಗಳಿರ್ವರುಂ ।
ಚಿಂತಿಸುವ ಸಮಯಕೆ ವಸಿಷ್ಠಮುನಿಪತಿ ಬಂದು ।
ಸಂತಾನಮಭ್ಯುದಯಮಾದಪುದು ಮುಂದೆ ನಿಮಗೆಂದು ಸಂಪ್ರೀತಿಯಿಂದ ॥
ಸಂತೈಸೆ ಬಳಿಕ ರಘುಕುಲ ಸಾರ್ವಭೌಮನ ।
ತ್ಯಂತ ಹರ್ಷಿತನಾಗಿರಲ್ಕೆ ತಲೆದೋರಿತು ವ ।
ಸಂತಕಾಲಂ ವಿರಾಜಿತರಸಾಲಂ ವಿರಹಿಹೃದಯ ಶೂಲಂ ತಾನೆನೆ ॥ ೨೨ ॥

ಅರಸಂಚೆ ಸರಸಿಯಂ ಕಲಪಿಕಂ ತಳಿತ ಮಾ ।
ಮರನಂ ಚಕೋರತತಿ ಚಂದ್ರಿಕೆಯನಳಿಕುಲಂ ।
ಬಿರಿಮುಗುಳನರಗಿಳಿ ಬನಂಗಳಂ ವಿರಹಿಗಳ್ ಕೂರ್ಸರಂ
ಸಾರ್ದೆಸೆಯಲು ॥
ಧರೆಯೊಳೆಳಗಾಳಿಯಂ ಶೀತಳದ ವಾರಿಯಂ ।
ತರುಗಳ ನೆಳಲ್ಗಳಂ ಸೇರತೊಡಗಿತು ಜನಂ ।
ಪರಿವೃತ ವಸಂತಕಾಲದೊಳಿಂತಿರಲ್ ಬಳಿಕ ಸೀತೆ
ಋತುಮತಿಯಾದಳು ॥ ೨೩ ॥

ಮಲ್ಲಿಕಾಸ್ಮಿತರುಚಿರೆ ಕುಂದಕುಟ್ಮಲರದನೆ ।
ಪಲ್ಲವಾಧರೆ ಭೃಂಗಕುಂತಳೆ ಕುಸುಮಗಂಧಿ ।
ಸಲ್ಲಲಿತ ಕೋಕಿಲಾಲಾಪೆ ಚಂಪಕವರ್ಣೆ ಮೃದುಮಧುರಕೀರವಾಣಿ॥
ಫುಲ್ಲಲೋಚನೆ ಚಾರುಚಂದ್ರಬಿಂಬಾನನೆ ಲ।
ಸಲ್ಲತಾಗಾತ್ರೆ ಜಾನಕಿ ವಿರಾಜಿಸಿದಳ್ ಸ।
ಮುಲ್ಲಾಸದಿಂ ಪುಷ್ಪವತಿಯಾಗಿ ವಿಕಸಿತವಸಂತಲಕ್ಷ್ಮಿಯ
ತೆರದೊಳು ॥ ೨೪ ॥

ಮೊಡವಿ ಮೂಡಿದ ಮೊಗಂ ಸೊಗಡುಗಂಪೊಗೆದ ಮೈ ।
ತೊಡವುಗಳ ತೊಡರಿಲ್ಲದವಯವಂ ಪೂಗಳಂ ।
ಮುಡಿಯದ ಬಳಲ್ದುರುಬು ನಿಚ್ಚಳದ ಕಣ್ಮಲರ್ ತೊಳೆಸ ಪಣೆ
ಮಿರುಪ ಕದವು ||

ಕಡುಬಿಣ್ಪಿಡಿದ ಕುಚಂ ಮಾಧವೀಲತೆಯ ಸೆಳೆ ।
ಪಿಡಿದ ಕೈ ನಿರಿಯಳಿದ ನಸುಮಾಸಿದಂಬರಂ ।
ಕುಡಿವರಿವ ಲಜ್ಜೆ ಸಿಂಗರಕೆ ಮಿಗಿಲಾಯ್ತುವನಿಸುತೆಗೆ
ಋತುಮತಿಯಾಗಲು || ೨೫ ||

ಸಮುಚಿತ ಸ್ತ್ರೀಧರ್ಮದಿಂದ ನಾಲ್ಕನೆಯ ದಿನ ।
ದಮಲ ಮಜ್ಜನದಲಂಕಾರದೊಳೆಸೆದಳಂದು ।
ನಿಮಿಷದೊಳ್ ತ್ರಿಜಗಮಂ ಗೆಲ್ವೆನೆಂದಂಗಜಂ ಮಸೆದಾಯುಧೋ
ತ್ತಮವೆನೆ ॥

ಕ್ರಮದಿಂದ ಮನ್ಮಥಂ ಕಲುಷಮಂ ಶೋಧಿಸಿದ ।
ರಮಣೀಯ ಸೌಂದರ್ಯ ಸಾರಮೋ ಸ್ಮರನ ನಿರು ।
ಪಮ ಯಶಃಶ್ರೀಯ ಸಾಕಾರಮೋ ಪೇಳೆನಲ್ ಸೀತೆ ರಾಘವನ
ಕಣ್ಗೆ ॥ ೨೬ ॥

ಸ್ಫುರದುತ್ಕಟಾಕ್ಷ ಚಂಚಲದಿಂದ ಚಾರು ಪೀ ।

ವರಪಯೋಧರದಿಂದ ಪರಿವೃತಸುಮೋಹಿಲಾ।
ತರಳಕಿಂಕಿಣಿಯ ಘನರವದಿಂದಲಾರಾಜಿಸುವ ಕಂಕಣಂಗಳಿಂದ ॥

ಸರಸತರಲಾವಣ್ಯಪೂರಪ್ರವಾಹದಿಂ।
ಭರಿತಕಬರೀಬರ್ಹಲೀಲೆಯಿಂ ಮಳೆಗಾಲ।
ದಿರವನೆಚ್ಚರಿಪರಸಿಯಂ ಕಂಡು ರಾಮನ ಮನಶ್ಚಾತಕಂ ನಲಿದುದು ॥೨೭॥

ಮಂದಗಮನೆಯ ಮಂದಹಾಸದ ವಿಲಾಸಮಂ।
ಕುಂದರದನೆಯ ಕುಂದದವಯವದ ಸೌಂದರ್ಯ।
ದಂದಮಂ ವಕ್ರಕುಂತಳೆಯ ವಕ್ರಾವಲೋಕನದ ಭಾವದ ಬಗೆಯನು ॥

ಚಂದನಸುಗಂಧಿನಿಯ ಚಂದ್ರಾಸ್ಯದೆಸಕಮಂ।
ಬಂದುಗೆದುಟಿಯುಳ ಬಂಧುರದ ಸಿಂಗರವನೇ।
ನೆಂದು ಬಣ್ಣಿಸಬಹುದು ರಾಮಣೀಯಕಮಾದ ರಾಮನ
ಮಡದಿಯೊಲವನು ॥ ೨೮ ॥

ನೊಸಲೊಳಾರಾಜಿಸುವ ತಿಲಕದಿಂದಲಕದಿಂ।
ಮಿಸುಪ ಮೈ ನಸುದೋರ್ಪ ವಸನದಿಂ ದಶನದಿಂ।
ಪಸರಿಪೆಳನಗೆಯ ತೆಳ್ಗದಪಿನಿಂ ಪದಪಿನಿಂದಮರ್ದ ಪೊಂದುಡಿಗೆಯಿಂದ ॥
ಅಸಿವೆರಲ್ಗಳೊಳೊಪ್ಪುವುಗುರ್ಗಳಿಂ ತಿಗುರ್ಗಳಿಂ।
ಪೊಸತೆನಿಪ ಕುಂಕುಮದ ಕಂಪಿನಿಂದಿಂಪಿನಿಂ।
ತ್ರಿಸರದೊಳ್ ಮೆರೆವ ಗುರುಕುಚದಿಂದ ಕಚದಿಂದ ಕಾಂತೆ
ಕಣ್ಗೆಸೆದಿರ್ದಳು ॥ ೨೯ ॥

ಪಜ್ಜಳಿಪ ರತ್ನಪ್ರದೀಪಂಗಳಿಂದ ಪೊಸ।
ಬಜ್ಜರದ ಮಣಿಮಂಚದಿಂದಂಚೆದುಪ್ಪಳಿನ।
ಸಜ್ಜುಕದಲರ್ಗಳಿಂದೆಸೆವ ಮೆಲ್ವಾಸಿನಿಂ ರಾಜೋಪಭೋಗ್ಯಮಾದ ॥

ಸೆಜ್ಜೆವನೆಯೊಳ್ ವಿರಾಜಿಪ ಕಾಂತನೆಡೆಗೆ ಸಸು ।
ಲಜ್ಜೆ ಮಂದಸ್ಮಿತಂ ಕಿರುಬೆಮರ್ ಕಾತರಂ ।
ಪಜ್ಜೆದೋರಲ್ ಪೊಗದೊಳ್ಪೆತಂದು ಸಾರ್ದಳೊಯ್ಯನೆ
ಮತ್ತಗಜಗಾಮಿನಿ ॥ ೩೦ ॥

ಸಾಗರವ ವಡುವೆ ಫಣಿತಲ್ಪದೊಳ್ಪರಿಯೊಡನೆ ।
ಭೋಗಿಸುವ ತೆರದಿಂ ಮಿಥಿಳೇಂದ್ರಸುತೆಯು ಸಂ।
ಯೋಗದಿಂ ರಘುಕುಲಲಲಾಮನೆಸೆದಂ ಮಸುಜಲೀಲೆಗಿದು
ಸಾರ್ಥಮೆನಲು ॥
ರಾಗರಸದಿಂದ ಪುಳಕಂ ಪ್ರೋಕ್ಷ್ಮ ಸಲಿದು ಮದ।
ಸಾಗಮುಪ್ರೌಢಿಯಿಂ ಸಕಲರತಿಕಲೆಗಳಿಂ ।
ಪಾಗಲ್ಪರಸ್ಪರವಿಚಾರಮಂ ಮರೆದೈಕ್ಯಭಾವದಿಂ ಸೊಗಸುಗೊಳಿಸಿ ॥ ೩೧ ॥

ಜಿಂಗೊಡದೆ ಮೋಸವೋಗದೆ ತವಕಮುಡುಗಿ ಪೆರ ।
ಪಿಂಗದೆ ವಿಘಾತಿಗಳುಕದೆ ಕೈಮುರಿಯದೆ ಚದು ॥
ರಿಂಗದೆ ನೆಗಲ್ದ ಪುಳಕಂ ಬಿಡದೆ ತಲ್ತಲ್ಪರಡಗವಲಪಿಕೆದೋರದೆ ॥
ಅಂಗಜನ್ರಮವ ನಿಟ್ಟಿಸದೆ ಸಲೆ ರಂಜಿಸುವ ।
ಸಂಗರಸದಾಳಾಪದಿಂದೆಸೆದರೊಂದಿನಿಸು ।
ಭಂಗವಿಲ್ಲದೆ ವೀರಭಟರೊಪ್ಪುಗುವಂತೆ ಸಮರತಿಯೊಳಾ
ದಂಪತಿಗಳು ॥ ೩೨ ॥

ಇಂತೆಸೆವ ಸಮರತಿಯ ಸೊಬಗಿಂದಲವರಿರ್ವ ।
ರುಂ ತೊಳಗುತಿರೆ ಬಳಿಕ ಪರವಿಷ್ಣುನಕ್ಷತ್ರ ।
ದಂತದೊಳ್ ವೈದೇಹಿಗಾಯ್ತು ಗರ್ಭಾಧಾನಮುದರ ಫಲಮಂ ನೋಡಲು॥
ಎಂತಾದೊಡಂ ತನ್ನ ಕಾಂತನನಗಲ್ಪುದಿಸೀ ।
ಮಂತಿನಿ ಪರಸ್ಥಳದೊಳಣುಗರಂ ಪಡೆದಪಳ ।
ದಂ ತಿಳಿಯದುತ್ಸವದೊಳಿರ್ದಳಾ ಕಾಂತೆ ಬಸಿರಾದ
ಲಾಂಛನವಪನಾಂತು ॥ ೩೩ ॥

ಸಣ್ಣಾನವು ಬಳೆಯೆ ಶಿವಳಿಗಳಡಗೆ ತೆಳ್ವಾಸೆ ।
ನುಣ್ಣನೆ ಪೊಗರ್ವಡೆಯೆ ಚೂಚುಕದ ಕಪ್ಪುಣ್ಮೆ ।
ತಿಣ್ಣವೊಲೆ ಬಿಣ್ಪಡರೆ ಕಾಲ್ಮಂದಗತಿಗಲಸೆ ನಗೆನೊಗಂ ಬೆಳ್ಪಿದೋಲೆ ॥
ಕಣ್ಣವೆಯು ಪುರ್ಬಿನ ನವಿರ್ಮಿಂಚುದಳೆಯೆ ತನು ।
ತಣ್ಣಸದೊಳೆಸೆಯೆ ಪೊಸಗಾಡಿವೆತ್ತಿರ್ದಳೀ ।
ವಣ್ಣಿಸುವೆನುಜ್ಜಲಸತ್ಕಾಂಚನ ಲತಾಂಗಿ ಸುತಲಾಂಛನದ
ಗರ್ಭದಿಂದೆ ॥ ೩೪ ॥

ಬೆಳ್ದಾವರೆಯೊಳೆರಗಿದಳಿಕುಲಂ ಗಗನಾಗ್ರ ।
ದೊಳ್ಜನದಿನಕೆ ಬೆಳೆವ ಚಂದ್ರಕಲೆ ಕನಕಾದ್ರಿ ।
ಯೊಳ್ದಿಟ್ಟಿಗೊಳಿಸುವಸಿತಾಂಬುದಂ ರಾರಾಜಿಸುವ ತೆರದೊಳಾಕಾಂತೆಯ ॥
ಒಳ್ವಳೆವ ಚೆಲ್ವಿನಾನನದೊಳುರೆ ಮಿರುಗುವ ಕು ।
ರುಳ್ಗಳಂಗಲಸಿನಡುವಿನೊಳ್ಪೊಳೆವ ಗರ್ಭಂ ನೆ ।
ಗಳ್ದಕುಚದೊಳ್ಮಸುಪ ಚೂಚುಕದ ಕಪ್ಪು ಚೆಲ್ವಿಂದೆ ಕಣ್ಗೆ
ಸೆದಿರ್ದುದು ॥ ೩೫ ॥

ಚಂದ್ರಮುಖಿಯಾದ ವೈದೇಹಿಯು ಜಠರವೆಂಬ ।
ಚಂದ್ರಕಾಂತದ ಮಣಿಯು ಮಧ್ಯದೊಳ್ ತವೆ ರಾಮ ।
ಚಂದ್ರನೆಂಬಖಿಳಲೋಕಾನಂದಕರವಾದ ಸಂಪೂರ್ಣ ಕಲೆಗಳುಳ್ಳ ॥
ಚಂದ್ರನ ವಿರಾಜಿಸುವ ಪ್ರತಿಬಿಂಬವಾಗಿರ್ದ ।
ಚಂದ್ರನೆನೆ ಶಿಶು ಗರ್ಭದೊಳ್ ತೋಳಗೆ ಕೂಡಿರ್ದ ।
ಚಂದ್ರಿಕೆಯೊಲಂಗರುಚಿ ಬೆಳ್ಪಡರಲೊಪ್ಪಿನಿಂದೊಪ್ಪಿರ್ದ
ಳುತ್ಪಲಾಕ್ಷಿ ॥ ೩೬ ॥

ಕಾಂಚನಲತಾಕೋಮಲಾಂಗಿ ಗರ್ಭಿಣಿಯಾದ ।
ಲಾಂಛನವನಿನಕುಲಾಧೀಶ್ವರಂ ಕಂಡು ರೋ ।
ಮಾಂಚನದ ಹರ್ಷದಿಂ ನಾಲ್ಕನೆಯ ತಿಂಗಳೊಳ್ ವಿಭವದಿಂ
ಭೂಸುರರ್ಗೆ ॥

ವಾಂಛಿತವನಿತ್ತು ಪುಂಸವನ ಸೀಮಂತವಂ ।
ತಾಂ ಚಾರುಲೋಚನೆಗೆ ವಿಸ್ತರಿಸಿದಂ ಚಿತ್ತ ।
ಚಾಂಚಲ್ಯವಿಲ್ಲದೆ ವಸಿಷ್ಠ ವಿಶ್ವಾಮಿತ್ರಯುಕ್ತದಿಂ ಮಾಡಿಸಲ್ಕೆ ॥ ೩೭ ॥

ಯೋಜನತ್ರಯದಗಲದುತ್ಸವದ ಶಾಲೆಯಂ ।
ರಾಜಿಸಲ್ ಕೈಗೈಸಿ ಬಳಿಕಲ್ಲಿ ನೆರೆದ ಸಾ ।
ಸಾ ಜನಕೆ ದಿವಿಜರ್ಗೆ ಸುಗ್ರೀವ ಮೊದಲಾದ ಕಪಿಗಳ್ಗೆ ಭೂಸುರರ್ಗೆ ॥

ರಾಜವರ್ಗಕೆ ವಿಭೀಷಣಮುಖ್ಯ ದೈತ್ಯರ್ಗೆ ।
ಭೋಜನ ಸುಗಂಧ ತಾಂಬೂಲ ಪುಷ್ಪಾಕ್ಷತೆಯು ।
ಪೂಜೆ ವಸ್ತ್ರಾಭರಣದುಡುಗೊರೆಗಳಂ ಕೊಟ್ಟು ರಾಘವಂ
ಮನ್ನಿಸಿದನು ॥ ೩೮ ॥

ಉತ್ಸವಕೆ ಬಂದನಿಬರೆಲ್ಲರಂ ಶರಣಜನ ।
ವತ್ಸಲಂ ಸತ್ಕರಿಸಿ ಬೀಳ್ಕೊಟ್ಟು ರಾಜಸಂ ।
ಪತ್ಸುಖದೊಳಿರ್ಪನಿತರೊಳ್ ಬಳಿಕ ಸೀತೆ ನಿಜಕಾಂತನೇಕಾಂತಕೈದಿ ॥

ಕುತ್ಸಿತಂ ಪೊರ್ದದಾಶ್ರಮದ ಋಷಿಪತ್ನಿಯರ ।
ಸತ್ಸಂಗದೊಳ್ ತನ್ನ ಬೇಸರಂ ತವಿಸುವೆನಿ ।
ದುತ್ಸುಕಂ ತನಗವರಿನಿನ್ನೊಮ್ಮೆ ಬನಕೆ ತನ್ನಂ ಕಳುಹಬೇಕೆಂದಳು ॥ ೩೯ ॥

ಆ ಕ್ಷಿತಿಜೆ ಬಯಕೆಯಂ ಬಿನ್ನೈಸೆ ಕೇಳ್ದು ನಗು ।
ತಾಕ್ಷೇಪದಿಂದ ಕಳುಹುವನಾಗಿ ಸಂತೈಸಿ ॥
ರಾಕ್ಷಸಾಂತಕನಿರಲ್ಕೊಂದಿರುಳ್ ಕನಸುಗಂಡೇಳುತ ವಸಿಷ್ಠನೊಡನೆ ॥

ಈ ಕ್ಷೋಣಿಸುತೆ ಗಂಗೆಯಂ ಕಳೆದು ಕಾಡೊಳ್ ಮ ।
ಹಾ ಕ್ಷೀಣೆಯಾಗಿ ದೇಸಿಗರಂತೆ ದೆಸೆದೆಸೆಯು ।
ವೀಕ್ಷಿಸುತ ಮರುಗುತಳುತಿರ್ದುದಂ ಕಂಡೆನಿದು ಲೇಸಹುದೆ
ಪೇಳೆಂದನು ॥೪೦॥

ಎನೆ ಕನಸಿದೊಳ್ಳಿತಲ್ಲೆಂದದಕೆ ಶಾಂತಿಯಂ ।
ಮುನಿವರ ವಸಿಷ್ಠಂ ನೆಗಳ್ಚಿದಾ ಬಳಿಕ ಮನ ।
ದನುತಾಪದಿಂ ಪ್ರಜೆಯನಾರೈವುದಂ ಮರೆವೆರಡು ಮೂರು ದಿವಸವಿರ್ದು ॥
ಜನಮಲಸಿದಪುದೆಂದು ರಾತ್ರಿಯೊಳ್ ಪೊರಮಟ್ಟು ।
ದಿನಪಕುಲತಿಲಕನೇಕಾಂತದೊಳ್ ನಗರಶೋ ।
ಧನೆಯ ಚಾರರೊಳೊರ್ವನಂ ಕರೆಸಿ ಕೇಳ್ದನಿಂತೆಂದು

ವಿನಯೋಕ್ತಿಯಿಂದ ॥ ೪೭ ॥

ನಿಂದಿಸರಲೇ ಪ್ರಜೆಗಳಿನ್ನೆಗಂ ತನ್ನ ಗುಣ ।
ಕೊಂದಿಸರಲೇ ಪಳಿವನಮಲತರ ಕೀರ್ತಿಯಂ ।
ಕಂದಿಸರಲೇ ದೂಸರಿಂದ ಭುಜವಿಜಯಪ್ರತಾಪತೇಜವನಿಳೆಯೊಳು ॥
ನಂಬಿಸರಲೇ ಜರೆದು ನಿಜವಂಶದೇಳ್ಗೆಯಂ ।
ಕುಂದಿಸರಲೇ ಬೋಡಿಗಳೆದು ಪಷವಮಾನದೊಳ್ ।
ಸಂಧಿಸರಲೇ ಕೋಕು ಕೊರತೆಗಳನೆಂದವನನಸುರಾರಿ
ಬೆಸಗೊಂಡನು ॥ ೪೮ ॥

ದೇವ ನಿನ್ನ ಪೆಸರಿಸಿದನೀಶನಾದಪಂ ।
ಸೇವಿಸಿದಪಂ ಚತುರ್ಮುಖನಾಗಲುಳ್ಳವಂ ।
ಕಾವುದೆಂದ್ಪೈದೆ ಮರೆಯೊಕ್ಕವಂ ಜಗದೊಳಾಚಂದ್ರಾರ್ಕಮಾಗಿ ಬಾಳ್ವ ॥
ಶ್ರೀವಿಭವದಿಂ ಶಕ್ರಪದವಿಯಂ ಪಡೆದಪಂ ।
ಭೂವಲಯದೊಳ್ ನಿಂದಿಸುವರುಂಟೆ ತರಣಿಯಂ ।
ಕಾವಳಂ ಮುಸುಕಿರ್ದೊಡೇನಾದುದೆಂದವಂ ಬಿನ್ನೈಸಿ
ಕೈಮುಗಿದನು ॥ ೪೯ ॥

ಏನಾದೊಡಂ ಕಟಕಿಯಾಗಿರ್ಪುದೀ ಮಾತು ।
ಭಾನುವಂ ಕಾವಳಂ ಮುಸುಕಲೇನೆನಲಿನ್ನ ।
ಧೀನವಾದರಸುತನಕಾವುದೂಣೆಯವೆಂಬರೆಂದು ರಘುಪತಿ ಕೇಳಲು ॥

ನೀನೆ ಪಾವನರೂಪನೆಂಬುದಂ ಮುನಿಯ ವಧು ।
ತಾನೆ ತೋರಿಸಳೆ ಲೋಕದ ಜನಕೆ ಜಗದೊಳ ।
ಜ್ಞಾನಿಗಳ್ ನುಡಿದ ನಿಂದೆಯನುಸಿರಲವ್ಮೆ ನೆಂದವನೆರಗಿದಂ
ಪದದೊಳು ॥ ೪೪ ॥

ಏಳಂಜಬೇಡಿನ್ನು ಮಾಜದಿರ್ ತನ್ನಾಣೆ ।
ಹೇಳೆಂದು ರಘುಕುಲಲಲಾಮನೊತ್ತಾಯದಿಂ ।
ಕೇಳಲವನೆಂದನವಧರಿಸೊರ್ವ ಮಡಿವಳಂ ಮಲಿನಮಂ ತೊಳೆವಸಾಗಿ ॥

ಕಾಳುಗೆಡೆದಂ ಜೀಯ ಸದ್ಗುಣಚರಿತ್ರನಾ ।
ಮಾಳಿಯಿಂ ಜಗಮಂ ಪುನೀತಮಂ ಮಾಳ್ಪನಿ ।
ನ್ನೀಳಿಗೆಯನವನೆತ್ತ ಬಲ್ಲನೆನಲೇನೆಂದನೆನಲಾತನಿಂತೆಂದನು ॥ ೪೬ ॥

ಪೆಂಡತಿ ತವರ್ಮನೆಗೆ ಮುಳಿದು ಪೇಳದೆ ಪೋದ ।
ಚಂಡಿತನಕವಳ ತಾಯ್ತಂದೆಗಳ್ ಕಳುಹೆ ಬಂ ।
ದಂಡಲೆದೊಡಿನ್ನೊಲ್ಲೆನಗಲಿರ್ದ ಮಡದಿಯಂ ಮತ್ತೆ ರಘುನಾಥನಂತೆ ॥

ಕೊಂಡಾಳುವವನಲ್ಲ ತಾನೆಂದು ರಜಕನು ।
ದ್ದಂಡದೊಳ್ ನುಡಿಯೆ ಕಿವಿಮುಚ್ಚಿಕೊಂಡೆಂ ದೇವ ।
ಖಂಡಿತವ ಮಂತ್ರಪೂತವ ಹವಿಯನರಿದೆಂಜಲಿಪುದೆ ವಾಯಸ
ಪೊಂದನು ॥ ೪೮ ॥

ಎಂದು ಬಿನ್ನೈಸೆ ಕೇಳ್ದಾತನಂ ಕಳುಹಿ ರಘು ।
ನಂದನಂ ಬಂಧನಕ್ಕೊಳಗಾದ ಮತ್ತಗಜ ।
ದಂದದಿಂ ನಿಜ ಶಿರವನೊಲೆದು ಮೂಗಿನ ಮೇಲೆ ಬೆರಳಿಟ್ಟು
ಮೌನದಿಂದ ॥

ನಿಂದು ಸ್ವೈರಗಾಗಿ ನೆನೆನೆನೆದು ಚಿತ್ತದೊಳ್ ।
ನೊಂದು ಬಿಸುಸುಯ್ದು ಕಡುಪಳಿದು ಕಾತರಿಸಿ ಕಳೆ ।
ಗುಂದಿ ದುಮ್ಮಾನದಿಂ ಪ್ಲೊಕ್ಕನಂತಃಪುರವ ಪುತ್ರಪುಗನಹಿಪನಂತೆ ॥ ೪೯ ॥

ಓಲಗಂಗುಡದೆ ಬಾಗಿಲ್ಗೆ ಬಂದಖಿಳ ಭೂ ।
ಪಾಲರಂ ಕರೆಸಿ ಕಾಣಿಸಿಕೊಳ್ಳದೊಳಗೆ ಚಿಂ ।
ತಾಲಕಾಂಗಿಯ ಕೇಳಿಗೆಡೆಗೊಟ್ಟು ರಾಜೇಂದ್ರನಿರೆ ಕೇಳ್ದು ಭೀತಿಯಿಂದ ॥
ಆ ಲಕ್ಷ್ಮಣಾದಿಗಳ್ ಪೊಕ್ಕರಂತಃಪುರವ ।
ನಾಲಿಂಗಿಸಿದ ಜಾಡ್ಯದಿಂದ ಜಡದವಯವದ ।
ನೀಲಾಂಗನಂ ಕಂಡು ಕಾಲ್ಗೆರಗಿ ನುಡಿಸಲಮ್ಮದೆ ಸುಮ್ಮ
ನಿರುತಿರ್ದರು ॥ ೪೮ ॥

ಎಷ್ಟು ಕುಳ್ಳಿರ್ದು ಕರುಣಾಳುಗಳ ಬಲ್ಲಹಂ ।
ವುಟ್ಟು ಗೃಪಸುಜರಂ ಕರೆದಿಳೆಯೊಳಿಂದೆನಗೆ ।
ಪೊಷ್ಟಿದಪವಾದವುಂ ನೀವರಿದುದಿಲ್ಲಕಟ ಸಾಕಿನ್ನು ನೆರವಿಗಳೊಳು ॥
ಕಟ್ಟ ಕಳ್ಳನವೋಲಾಡಿಸಿಕೊಳಲ್ಕಾರೆನೊಡ ।
ಲಿಪ್ಟಲ್ಲಿ ನಿಂದೆಗೊಳಗಾಗಿ ಬದುಕುವನಲ್ಲ ।
ತಿಪ್ಟಿ ತೀರವ ವಿಲಗಕಂಜುವೆಂ ಸೀತೆಯುಂ ಬಿಟ್ಟಲ್ಲದಿರೆನೆಂದನು ॥ ೪೯ ॥

ಇವಳಯೋನಿಜೆ ರೂಪಗುಣಶೀಲಸಂಪನ್ನೆ ।
ಭುವನಪಾವನೆ ಪುಣ್ಯಚರಿತೆ ಮಂಗಳಮಹೋ ।
ತ್ಸವೆ ಪತಿವ್ರತೆಯೆಂಬುದಂ ಬಲ್ಲೆನಾದೊಡಂ ನಿಂದೆಗೊಳಗಾದ ಬಳಿಕ ।
ಅವನಿಸುತೆಯಂ ತನಗೆ ಬಿಡುವುದೇ ನಿಶ್ಚಯಂ ।
ರವಿ ಕುಲದ ರಾಯರಪಕೀರ್ತಿಯಂ ತಾಳ್ದಪರೆ ।
ಕುವರನಾಗಿರ್ದ ತನ್ನಂ ತಾತನುಳಿದುದಿಲ್ಲವೆ ಸತ್ಯಭಾಷೆಗಾಗಿ ॥ ೫೦ ॥

ಕಲಿಯುಗದ ವಿಪ್ರರಾಚಾರಮಂ ಬಿಡುವಂತೆ ।
ಪಲವು ಮಾತೇನಿನ್ನು ಸೀತೆಯಂ ಬಿಟ್ಟೆನೆನೆ ।
ಜಲನಗರವಿಪತಿಕ್ಷಣಮೆ ಕಾರುಣ್ಯನಿಧಿಗೆ ನುತ ಸನಾನಸದುಗಿ ಭೀತಿಯಿಂದ ॥

ಸೆಲೆಗೊಂಡ ವೇದವಂ ಧರೆಯ ಪಾಷಂಡಿಗಳ್ ।
ಸಲೆ ನಿಂದಿಸಿದೊಡದಂ ಮಾಣ್ದಪರೆ ದ್ವಿಜರಕಟ ।
ಕುಲವರ್ಧಿನಿಯನೇತು ಬಿಡುವೆ ನೀಂ ಪೇಳೆಂದರನುಜಾತ
ರಗ್ರಜಂಗೆ ॥ ೫೧ ॥

ಭಯಶೋಕದಿಂದ ಗದ್ಗದಿಸೆ ಕಂಠವುದಸ್ರು ।
ನಯನದೊಳ್ ತುಳುಕೆ ಭರತಂ ಕರೆವ ಕಪಿಲೆಯಂ ।
ನಯವಿದರ್ ಪೊಡೆವಡವಿಗಟ್ಟುವರೆ ಪಾವಕನೊಳರಸಿಯಂ
ಪೊಗಿಪರೆಂದು ॥

ಪ್ರಿಯೆ ನಿನಗೆ ಪರಿಶುದ್ಧೆ ಕುಲಕೆ ಮಂಗಳೆ ಸುತರ್ ।
ದಯಕೆ ನಿರ್ಮಲೆ ತನಗೆ ಗತಿಗೊಡುವ ಸೊಸೆಯೆಂದು ।
ಬಯಸಿದೊಡೆ ಬಂದಯ್ಯನಾಡನೆ ಸುರಾಸುರರ ಮುಂದೆ ಕಪಿ
ಲಟಿಕವರಿಯೆ ॥ ೫೨ ॥

ಅದನೆಲ್ಲಮಂ ಮರೆದು ಹುಲುವ ನುಜ ರಜಕನಾ ।
ಡಿದ ದೂಸರಿಂ ನೆನೆದು ಕುಲ ಪತ್ನಿಯಂ ಬಿಡುವ ।
ಹದನಾವುದಕಟ ಗುರು ಲಘುವಿನಂತರವ ನೆಣಿಸವೆ ಬರಿದೆ ಮೂಢರಂತೆ ॥
ಎದೆಗೆಟ್ಟು ದೇವಿಯಂ ದೂಷಿಯೆಂಬರೆ ಜೀಯ ।
ಪಮಳವಿಹುದೆಂದು ವಿನಯದೊಳಗ್ರಜಾತನಂ ।
ಕದುಬಿ ನುಡಿಪಂ ಭರತನಾತನಂ ನೋಡುತೊಯ್ಯನೆ
ಭೂಪನಿಂತೆಂದನು ॥ ೫೩ ॥

ತಮ್ಮ ನೀನಾಡಿದಂತವನಿಸುತೆ ನಿರ್ಜೆಯಹು ।
ದಮ್ಮಳಿಸಬೇಡ ಸೈರಿಸಲಾರೆನೀ ದೂಸ ।
ರಂ ಮಹಿಯೊಳುಳಿದರೇ ಪೃಥು ಪುರೂರವ ಹರಿಶ್ಚಂದ್ರಾದಿ ನರಪತಿಗಳು ॥
ಸುಮ್ಮನಪಕೀರ್ತಿಗೊಳಗಾಗಲೇತಕೆ ಮಮತೆ ।
ಯಂ ಮಹಾಯೋಗಿ ಬಿಡುವಂತಿವಳನುಳಿವೆನೆನೆ ।
ಹಮ್ಮೈಸಿ ಲಕ್ಷ್ಮಣಂ ಕಂಪಿಸುತ ಕಿವಿ ಮುಚ್ಚುತಗ್ರಜಂ
ಗಿಂತೆಂದನು ॥ ೫೪ ॥

ಕಾಯ ಸುಖಕೋಸುಗಂ ಧರ್ಮ ಕೃತಮಂ ಬಿಡುವೊ ।
ಲಾಯತಾಕ್ಷಿಯು ಭಾವ ಶುದ್ಧಿಯಂ ತಿಳಿದಿರ್ದು ।
ಪಾಯವಪವಾದಕಿಂತರಸಿಯಂ ತೊರೆಯಬೇಕೆಂಬರೇ ನಿಸ್ಕರುಣವಿ ॥

ಜೀಯ ತುಂಬಿದ ಬಸಿರ್ಬೆಸಲಾಪ ದೇವಿಯಂ ।
ಪ್ರೀಯದಿಂದಾರೈದು ಸಲಹಬೇಕೆಂದು ರಘು ।
ರಾಯಂಗೆ ಲಕ್ಷ್ಮಣಂ ಬಿನ್ನೈಸೆ ಮೇಲ್ವಾಯ್ದು ಶತ್ರುಘ್ನ
ನಿಂತೆಂದನು ॥ ೨೫ ॥

ಬಿಡುವರೆಂತಿಕ್ಷ್ವಾಕು ವಂಶದವರರಸಿಯಂ ।
ನುಡಿವರೆಂತಿಳೆಯೊಳಾರಾದೊಡಂ ದೂಷರಂ ।
ಪಡೆವರೆಂತಮಲ ಸತ್ಕೀರ್ತಿಯಂ ಬುದ್ಧಿವೇಳ್ವದಕೊಡೆಯರಿಲ್ಲವಾಗಿ ॥
ಕಡಿವರೆಂತೇಳ್ಗೆಯಂ ಪೆಣ್ಣಾಳಲ್ವೆಂಕೆಯಿಂ ।
ಪಡುವರೆಂತನ್ವಯದ ಬಾಳ್ಕೆಯನಿದಕ್ಕೆ ಕಿವಿ
ಗುಡುವರೆಂತೀಗಳೆನ್ನೊಡಹುಟ್ಟಿದವರೆನುತ ಶತ್ರುಘ್ನನುರಿದೆದ್ದನು ॥ ೨೬ ॥

ಅರಸ ಕೇಳನುಜರಾಡಿದ ನುಡಿಗೆ ತಲೆವಾಗಿ ।
ತರಣಿಕುಲ ತಿಲಕನೊಯ್ಯನೆ ದೈನ್ಯ ಭಾವದಿಂ ।
ಕರಹರಿಸ ಜಾರವಪವಾದ ಶೃಂಖಲವುಂ ತನಗೆ ಜಾನಕಿಯನುಳಿವು ॥
ಪೊರೆಯುಬರ್ಚಿದುರಗನಂತಿರ್ದಪೆಂ ಸಾಕು ನಿಮು ।
ಗೊರೆದೊಡೇನಹುದೆಂದು ಬೇಸರೊಳ್ ಮನೆಗಳ್ಗೆ ।
ಭರತ ಶತ್ರುಘ್ನರಂ ಕಳುಹುತೇಕಾಂತದೆಡೆಯೊಳ್ ಸೌಮಿತ್ರಿಗಿಂತೆಂದನು ॥೨೭॥

ತಮ್ಮ ಬಾ ನೀನಿಂದುವರೆಗೆ ತಾನೆಂಬ ಮಾ ।
ತಂ ವಿಚಾರಿದವನಲ್ಲ ಕೆಲಬಲವನಾರಯ್ಯು ।
ತಂ ಪರುಗವಿರು ತನ್ನ ಕೊರಳಿಗಿಪೆ ಖಡ್ಗಮುಲ್ಲವೊಡೀಗ ಜಾನಕಿಯನು ॥

ಉಮ್ಮಳಿಸದೊಯ್ದು ಗಂಗೆಯ ತಡಿಯರಣ್ಯದೊಳ್ ।
ಸುಮ್ಮನೆ ಕಳುಹಿ ಬರ್ಪುದವಳೆನ್ನೊಳಾಡಿರ್ಪ ।
ಳೊಮ್ಮೆ ಕಾನನಕೈದಬೇಕೆಂದು ಬಯಕೆಯಿಂದವೆ ನೆವಂ
ನಿನಗೆಂದನು ॥ ೫೮ ॥

ಎನೆ ರಾಘವೇಂದ್ರ ನಿನ್ನಾಜ್ಞೆಯಂ ಮೀರಲ್ಕೆ ।
ತನಗೆ ಗೌರವಮುಪ್ಪುದೆಂದುದಂ ಮಾಡಲ್ಕೆ
ಜನನಿಯುಂ ಕೊಂದುಗ್ರಗತಿಯುಪ್ಪುದೇಗೈವೆನೆಂದು ಕಡು ಶೋಕದಿಂದ ॥
ತನು ಝೊಂಪಿಸಲ್ಕೆ ಸೆರೆ ಬಿಗಿದು ಕಂಬನಿಯಿಂದ ।
ನನೆದಳಲ್ದೊರೆಯೊಳಾಳ್ದನುಜನಂ ಘೂರ್ಣಿಸುತ ।
ನಿನಗೆ ದೋಷಮೆ ತಾನಿರಲ್ಕೆ ನಡೆ ಕಳುಹೆಂದರಸನೇಂ
ದಯೆದೊರೆದನೊ ॥ ೫೯ ॥

ಅಣ್ಣದೇವನೊಳಿಡಿದ ವಾತ್ಸಲ್ಯಮೆಂಬ ಬ ।
ಲ್ಗಣ್ಣಿಯೊಳ್ ಕಟ್ಟುವಡೆದಲ್ಲೆನಲರಿಯದೆ ನಿ ।
ರ್ವಿಣ್ಣಭಾವದೊಳಂದು ಲಕ್ಷ್ಮಣಂ ತುರಗ ಸಾರಥಿ ಕೇತನಂಗಳಿಂದ ॥
ಹೆಣ್ಣಿದ ವರೂಥಮಂ ತರಿಸಿ ಪೊರಗಿರಿಸಿ ನೆಲ ॥
ವೆಣ್ಣ ಮಗಳಿರುತಿರ್ದ ರಾಜ ಮಂದಿರಕೈದಿ ।
ಕಣ್ಣೊಳೀಕ್ಷಿಸದೆ ತಲೆವಾಗಿ ದೂರದೊಳೆ ನಿಂದಾ ಸೀತೆಗಿಂತೆಂದನು ॥೬೦॥

ತಾಯೆ ನೀನೇತಕೆಳಸಿದೆ ನಿನ್ನನೀಗ ರಘು ।
ರಾಯಂ ತಪೋವನಕೆ ಕಳುಹಿ ಬರಹೇಳಿದಂ ।
ಪ್ರೀಯಮುಳ್ಳೊಡೆ ರಥಂ ಪಣ್ಣಿ ಬಂದಿವೆಕೊ ಬಿಜಯಂಗೈವುದೆಂದು
ಮರುಗಿ ॥
ಛಾಯೆಗಾಣಿಸಿ ಸುಮಿತ್ರಾತ್ಮಜಂ ನುಡಿದಭಿ ।
ಪ್ರಾಯಮಂ ತಿಳಿಯದತಿಸಂಭ್ರಮಾನ್ವಿತೆಯಾದ ।
ಳಾಯತಾಂಬಕಿ ತನ್ನಭೀಷ್ಟಮಂ ಸಲಿಸುವಂ ಕಾಂತನೆಂಬುತ್ಸ
ವದೊಳು ॥ ೬೧ ॥

ಅಂಬುಜಾನನೆ ಬಳಿಕ ಪಯಣವಂ ನಿಶ್ಚೈಸಿ।
ನಂಬಿದರಭೀಷ್ಟಮಂ ಸಲಿಸುವ ಕೃಪಾಳು ತಾ ।
ನೆಂಬುದಂ ಕಾಣಿಸಿದನಿಂದೆನ್ನ ಕಾಂತನೆನಗೆಂದು ಕೌಸಲೆಗೆ ಪೇಳ್ದು ॥
ಮುಂಬರಿದೊಡಂಬಡಿಸಿ ಬಲವಂದು ಕಾಲ್ಗೆರಗಿ ।
ತುಂಬಿದ ಪರಕೆವೆತ್ತು ಕೈಕೆಯಿಾದೇವಿಗೆ ಶಿ।
ರಂಬಾಗಿ ವರಸುಮಿತ್ರೆಗೆ ನಮಿಸಿ ಸಖಿಯರಂ ಸಂತೈಸಿ
ಬೀಳ್ಕೊಂಡಳು ॥ ೬೨ ॥

ಮಿಗೆ ತಪೋವನದ ಋಷಿಗಳ್ಗೆ ಮುನಿಪತ್ನಿಯ ।
ರ್ಗಗುರು ಚಂದನ ಕುಂಕುಮಾನುಲೇಪನಗಳಂ ।
ಬಗೆಬಗೆಯ ದಿವ್ಯಾಂಬರಗಳಂ ವಿವಿಧ ಮಣಿಭೂಷಣಸುವಸ್ತುಗಳನು ॥
ತೆಗೆದು ಕಟ್ಟಿಸಿ ರಥದೊಳಿಂಬಿಟ್ಟು ರಾಮನಂ ।
ಘ್ರಿಗಳ ಚೆಂಜೊನ್ನ ಪಾವುಗೆಗಳಂ ತರಿಸಿಕೊಂ।
ಡೊಗುಮಿಗೆಯ ಹರುಸದೊಳಡರ್ದಳಂಗನೆ ಮಣಿವರೂಥಮಂ
ನಿಜಮಿಡೆಂದು ॥ ೬೩ ॥

ಅಗ್ರಜಂ ತರಿಸಂದು ತನ್ನೊಳಾಡಿದಕಜ್ಜ ।
ದುಗ್ರಮಂ ಬನಕೆ ಪೋದಪೆನೆಂಬದೇವಿಯು ಸ ।
ಮಗ್ರಸಂತೋಷಮಂ ಕಂಡು ಸೌಮಿತ್ರಿ ಮನದೊಳ್ ಮರುಗಿ
ಕಂಬನಿಯನು ॥
ನಿಗ್ರಹಿಸಿಕೊಂಡು ಸಾರಥಿಗೆ ಸೂಚನೆಗೈದು ।
ವ್ಯಗ್ರದಿಂಪೈದಿಸಿದನಾ ರಥವನಾಗ ದೇ।
ವಗ್ರಾಮ ನಿಲಯ ಲಕ್ಷ್ಮೀಶನುಂಗುಟದೊಳೊಗೆದಮಲ
ಜಾಹ್ನವಿಯತಡಿಗೆ ॥ ೬೪ ॥

ಪತ್ತೊಂಭತ್ತನೆಯ ಸಂಧಿ.

—:o:—

ಸೂ॥ ರಮಣಂ ತೊರೆದನೆಂಬುದಂ ಕೇಳ್ದು ಶೋಕದಿಂ।
ಭ್ರಮಿಸುತಡವಿಯೊಳಿರಲ್ ಕಂಡು ವಾಲ್ಮೀಕಿಯಾ।
ಶ್ರಮಕೊಯ್ದೊಡಲ್ಲಿ ಮಿಥಿಳೇಂದ್ರಸುತೆ ತನಯರಂ ಪಡೆದು
ಪದುಳ ದೊಳಿರ್ದಳು ||

ಅರಸ ಕೇಳ್ ಸೌಮಿತ್ರಿ ವೈದೇಹಿಯಂ ಕೊಂಡು।
ತೆರಳುವ ರಥಾಗ್ರದೊಳ್ ಚಲಿಸುವ ಪತಾಕೆ ರಘು।
ವರನಂಗನೆಯನುಳಿದನಹಹ ಎಂದಡಿಗಡಿಗೆ ತಲೆಗೊಡಹುವಂತಿರಲ್ಕೆ ||
ಪರಮ ದಾರುಣವಾಯ್ತಿದೆಂದಯೋಧ್ಯಾಪುರದ।
ನರವಿಯ ಜನಂ ಗುಜುಗುಜಿಸಿ ಮನದಿ ಕರಗಿ ಕಾ।
ತರಿಸುತಿರೆ ಪಸಿಸಂ ಕಾಲ್ವಟ್ಟೆಗೊಂಡನಿಲ ವೇಗದಿಂದಾ ರಥವನು ॥ ೧ ॥

ಧುರದೊಳಂತರನಿರಿದು ಮೆರೆಯುಲೇರುವ ರಥಂ।
ತರಳೆಯಂ ಕಾನನಕೆ ಕಳುಹಲಡರ್ವಂತಾಯ್ತು।
ಧರೆಯೊಳಾರ್ತರಂನೈದೆ ರಕ್ಷಿಸುವ ಬುದ್ಧಿ ಕೋಮಲೆಯ
ಕೊಲೆಗೆಲಸಕಾಯ್ತು ॥
ಕರುಣವಿಲ್ಲದೆ ಪೊರೆವ ಹರಣಮಂ ಸುಡಲಿ ನಿ।
ಷ್ಠುರದೊಳೀ ಕೃತ್ಯಕೆಂತೆಳಸುವೆನೊ ರಾಘವೇ।
ಶ್ವರನೇತಿದಕೆ ಬೆಸಸಿದನೊ ತನಗೆನುತ್ತ ಸೌಮಿತ್ರಿ ಮರುಗುತ
ನಡೆದನು ॥ ೨ ॥

ಬಳಿಕ್ಕಾರಲ್ಬಡು ಮುಂದೆ ಮಾರ್ಗವಂ ದಾಂಟಿಮುದು।
ಕಳ್ಳಿರ್ದ ವೃಗನೆದ್ದು ಬಲದ ಕಣ್ಣದಿರೆ ಕಂ।
ಡಳದೆಯೊಳವನಿಸುತೆ ನೋಡು ಲಕ್ಷ್ಮಣ ದುರ್ನಿಮಿತ್ತಂಗಳಂ
ಪಥದೊಳು ॥

ಡಿಳ್ಳವಾದವುದೀಗಲೆನ್ನ ಮನವಿದಕೆ ಮುಂ।
ದೊಳ್ಳಿತಾಗಲಿ ರಾಮನಾಯುಷ್ಯಕೈಶ್ವರ್ಯ।
ಕುಳ್ಳಿ ಭುಜಬಲಕಸುರರಂ ಗೆಲ್ದ ರಾಘವಂ ನಮ್ಮಂ ಸಲಹಲೆಂದಳು ॥ ೩ ॥

ಅನ್ನೆಗಂ ಜಾನಕಿಯ ಕಣ್ಗೆ ತೋರಿತು ಮುಂದೆ।
ಸನ್ನುತ ರಘೂದ್ವಹನ ಕೀರ್ತಿಯೆನೆ ಮಾಪಟ್ಟಿ।
ಯನ್ನಡೆದು ಮುಕ್ಕಣ್ಣನಂ ಸಾರ್ದು ಮೂಜಗದ ಪಾಪಮಂ ಮುರಿದು
ಮುಕ್ತಿ ॥

ಮುನ್ನೀರುಮುಂತಾಗಿ ಮೂದೇವರೊಳಗಾದ।
ಮುನ್ನಳ್ಳ ಮೂವತ್ತು ಮೂಕೋಟಿ ವಿಭುಧರಂ।
ತನ್ನೊಳ್ಮುಳುಗಿವರಣಕಿಪ ಪೆಂಪೊವವಿ ಪರಿವ ಬೆಳ್ನೊನಲ್
ದಿವಿಜನದಿಯು ॥ ೪ ॥

ತೆರತೆರದ ಕಲ್ಲೋಲ ಮಾಲೆಗಳ ಲೀಲೆಗಳ।
ಜಿರಿಜಿರಿವ ರಾಜಹಂಸಾಳಿಗಳ ಕೇಳಿಗಳ।
ಪರಿಪರಿಯ ನೀರ್ವನಿಗಳಾಕರದ ಶೀಕರದ ನೊರೆಯ ಬೊಬ್ಬುಳಿಯ
ಸುಳಿಯ ॥
ನೊರೆನೊರೆದು ಘೂರ್ಣಿಸುವ ಪರಿವುಗಳ ಮುರಿವುಗಳ।
ತಿರುತಿರುಗಿ ಸುಳಿವ ಜಲಜಂತುಗಳ ಗಂತುಗಳ।
ನೆರೆನೆರೆದು ಮುನಿಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ
ಬಂದಳು ॥ ೫ ॥

ತೆಂಗೆಳಗವುಂಗು ಪನಸಂ ದ್ರಾಕ್ಷೆ ಜಂಬು ನಾ।
ರಂಗ ಜಂಬೀರ ಖರ್ಜೂರ ಕಿತ್ತಿಳೆ ಮಾತು।
ಳಂಗ ತಿಂತ್ರಿಣಿ ಚೂತ ನೆಲ್ಲಿ ಬಿಲ್ವ ಕಪಿತ್ಥಮೆಂಬ ನಾನಾ ತರುಗಳು ॥
ತೊಂಗುವ ಫಲಾವಳಿಯ ಭಾರಂಗಳಾಪಗಂ।
ಸಂಗವಿವಸಿಳೆಗಿಳುಪಬೇಕೆಂದು ಬಾಗಿ ಬಂ।
ದಂಗನೆಯ ಕಣ್ಗೆಸೆದುವಿಸ್ಸೆಲವೊಳಾ ಜಾಹ್ನವೀ ನದಿಯ
ಬನದೆಡೆಯೊಳು ॥ ೬ ॥

ಇಳಿದು ರಥದಿಂದ ಮಂದಾಕಿನಿಗೆ ಪೊಡಮಟ್ಟು ।
ಬಳಿಕ ನಾವಿಕರೊಡನೆ ನಾವದೊಳ್ ಗಂಗೆಯಂ ।
ಕಳೆದು ನಿರ್ಮಲ ತೀರ್ಥದೊಳ್ ಮಿಂದು ಸೌಮಿತ್ರಿ ಮತ್ತೆ
ಭೂಜಾತೆ ಸಹಿತ ॥

ಒಳಗೊಳಗೆ ಮರುಗಿ ಬಿಸುಸುಯ್ದು ಚಿಂತಿಸುತ ಮುಂ ।
ದಳೆದುಗ್ರ ಮೃಗ ಪಕ್ಷಿ ಗಣದಿಂದ ಘೂರ್ಣಿಸುವ ।
ಹಳುವಮಂ ಪೊಕ್ಕನಡಿಯಿಡುವೊಡಸದಳವೆಂಬ ಕರ್ಕಶದ
ಮಾರ್ಗದಿಂದ ॥ ೭ ॥

ಶಕುನಿ ಚೀತ್ಕಾರ ಘೋಷಣಮಯಂ ತೃಣಮಯಂ ।
ವಿಕಿರದುಪಲಾಳಿ ಕರ್ಕಶಮಯಂ ಶಶಮಯಂ ।
ಪ್ರಕಟ ಕಂಟಕ ಕೀರ್ಣತರುಮಯಂ ರುರುಮಯಂ ವಿವಿಧೋಗ್ರ
ಜಂತುಮಯವು ॥

ನಕುಲ ಮೂಷಕ ಸರೀಸೃಪಮಯಂ ದ್ವಿಪಮಯಂ ।
ಸಕಲ ಭೂವಿಷಮ ಸಂಕುಲಮಯಂ ಬಿಲಮಯಂ ।
ವೃಕ ಸೂಕರ ವ್ಯಾಘ್ರ ಚಯಮಯಂ ಭಯಮಯಂ ತಾನೆನಿಸಿ
ಕಾಡಿರ್ದುದು ॥ ೮ ॥

ಇರುಳಂತೆ ಪಗಲಂತೆ ಮುಖದಂತೆ ದಿವದಂತೆ ।
ವರ ಪಯೋನಿಧಿಯಂತೆ ಕೈಲಾಸ ಗಿರಿಯಂತೆ ।
ನಿರುತವುಂ ಸೋಮಾರ್ಕ ಶಿಖಿ ಸಹಸ್ರಾಕ್ಷ ಹರಿ ಸುತ ಶಿವಾ
ವಾಸಮಾಗಿ ॥

ಧುರದಂತೆ ಕೊಳವಂತೆ ಕಡಲಂತೆ ನಭವಂತೆ ।
ಶರ ಪುಂಡರೀಕ ವಿದ್ರುಮ ಖುಷ್ಣಮಯದೊಳಿಡಿ ।
ಧಿರುತಿರ್ದುದಾ ಮಹಾಟವಿ ಜಾನಕಿಯ ಕಣ್ಗೆ ಘೋರತರವಾಗಿ
ಮುಂದೆ ॥ ೯ ॥

ಅಟವಿಯ ಮಹಾ ಘೋರ ಗಹ್ವರಂ ಮುಂದಿದು ।
ಘಟವಾಗೆ ನಡುನಡುಗಿ ಭೀತಿಯಿಂ ಸೀತೆ ಸಂ ।
ಕಟದಿಂದ ರಾಮ ನಾಮಂಗಳಂ ಜಪಿಸುತಲಿ ಸೌಮಿತ್ರಿ ಕಾನನವಿದು ||

ಅಟನಕಸದಳವುಪ್ಪುದಿಲ್ಲಿ ಪುಣ್ಯಾಶ್ರಮದ ।
ಜಟೆಗಳಂ ವಲ್ಕಲವನುಟ್ಟ ಮುನಿವಧುಗಳಂ ।
ವಟುಗಳಂ ಶ್ರುತಿ ಘೋಷ ಹೋಮ ಧೂಮಂಗಳಂ
ಕಾಣೆನೇದಳವಳಿವಳು ॥ ೧೦ ॥

ಎಲ್ಲಿ ಮುನಿ ಪೋತ್ರಮಾರ ಪಾವನ ವನದೆಡೆಗ ।
ಳೆಲ್ಲಿ ಸಿದ್ಧಾಶ್ರಮಂಗಳ ಮಂಗಳಸ್ಥಳಗ ।
ಳೆಲ್ಲಿ ಸುಹವಿಗಳ ಕಂಪೊಗೆದ ಪೊಗೆದಳೆವಗ್ನಿ ಹೋತ್ರದ ಕುಟೀರಂಗಳು ।

ಎಲ್ಲಿ ಪರಿಚಿತವಾದ ವಾದವೇದಪ್ಪನಿಗ ।
ಳೆಲ್ಲಿಗೊಯ್ದಪೆ ದಾರು ದಾರುಣದ ಕಟ್ಟಡವಿ ।
ಗಿಲ್ಲಿಗೇಕೈತಂದೆ ತಂದೆ ಸೌಮಿತ್ರಿ ಹೇಳೆಂದು ಜಾನಕಿ ಸುಯ್ದಳು ॥ ೧೧ ॥

ಪಾವನಕೆ ಪಾವನಂ ಮಂಗಳಕೆ ಮಂಗಳಮು ।
ದಾವನ ಚರಿತ್ರ ನಾಮಂಗಳಾ ರಾಘವನೆ ।
ಜೀವೇಶನಾಗಿರಲ್ಕಾತನಂಘ್ರಿಯನಗಲ್ಪಿಗನಾಂ ಬಂದ ಬಳಿಕ ॥

ಈ ವನದೊಳೆನ್ನ ಪುಣ್ಯಾಶ್ರಮಂ ಗೋಚರಿಪು ।
ದೇ ವನಜದರಳನಾಳಿದಾರಡಿಗೆ ಬೊಬ್ಬುಳಿಯು ।
ಪೂವಿನೊಳ್ ಮಧುವುಂಟೆ ಸೌಮಿತ್ರಿ ಹೇಳೆಂದು ಸೀತೆ
ಪೊದಕುಳಿಗೊಂಡಳು ॥ ೧೨ ॥

ನರನಾಥ ಕೇಳವನಿಸುತೆ ನುಡಿದ ಮಾತಿಗು ।
ತ್ತರವ ನಾಡದೆ ಮನದೊಳುರೆ ನೊಂದು ರಾಘವೇ ।
ಸ್ವರನೆಂಪ ಕಷ್ಟಮಂ ಪೇಳ್ವೆನೊ ಮೇಣುಸಿರದಿರ್ಪೆನೊ
ನಿಷ್ಠುರಮೊಳು ॥

ತರಣಿಕುಲ ಸಾರ್ವಭೌಮನ ರಾಣಿಯುಂ ಬನದೊ ।
ಳಿಱಿಸಿ ಪೋಪಪೆನೆಂತೊ ಮರಳದಿರ್ದೊಡೆ ಸಹೋ !
ದರನದೇನೆಂದಪನೊ ಹಾಯೆಂದು ಲಕ್ಷ್ಮಣಂ ಜೆಂದು
ಜೇಗುದಿಗೊಂಡನು ॥ ೧೨ ॥

ಉಕ್ಕಿದುವು ಕಂಬನಿಗಳಧರೋಷ್ಠ ಮಿಡಿಱಿತಲ ।
ಗಿಕ್ಕಿ ತಿರುಪಿದವೊಲಾಯ್ತೊಡಲೊಳೆಡೆವಱಿಯದುಸಿ ।
ರೊಕ್ಕುದುರೆ ಕಂಪಿಸಿದುದವಯವಂ ಕರಗಿತೆದೆ ಸ್ಥೈಱಣೆ ಸಮತೆಗೆಟ್ಟುದು ॥
ಸಿಕ್ಕಿದುವು ಕಂಠದೊಳ್ ಮಾತುಗಳ್ ಸೆರೆ ಬಿಗಿದು ।
ಮಿಕ್ಕು ಮೀರುವ ಶೋಕದಿಂದ ಬೆಂಡಾಗಿ ಕಡು ।
ಗಕ್ಕಸದ ಕೆಲಸಮನುಸಿರಲರಿಯದಪನೊಯ್ಯನವನಿಸುತೆಗಿಂತೆಂದನು ॥ ೧೩ ॥

ದೇವಿ ನಿನಗಿನ್ನೆಗಂ ಪೇಳ್ದುದಿಲ್ಲಪವಾದ ।
ಮಾಪರಿಸೆ ನಿನ್ನನೊಲ್ಲದೆ ರಘುಕುಲೋದ್ವಹಂ ।
ಸೀವರಿಸಿ ಬಿಟ್ಟು ಕಾಂತಾರಕ್ಕೆ ಕಳುಹಿಬಾಯೆಂದೆನಗೆ ನೇಮಿಸಿದೊಡೆ ॥
ಆ ವಿಭುವಿನಾಜ್ಞೆಯಂ ಮೀಱಲರಿಯದೆ ನಿಮ್ಮ ।
ನೀ ವಿಪಿನಕೊಡಗೊಂಡು ಬಂದೆನಿನ್ನೊಯ್ಯೊಯ್ಯ ।
ನಾವಲ್ಲಿಗಾದೊಡಂ ಪೋಗೆಂದು ಲಕ್ಷ್ಮಣಂ ಬಾಷ್ಪಲೋಚನನಾದನು ॥ ೧೪ ॥

ಬಿರುಗಾಳಿ ಪೊಡೆಯಲ್ಕೆ ಕಂಪಿಸಿ ಫಲಿತ ಕದಳಿ ।
ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕಿವಿ ।
ದೆರೆಗೆ ಬೀಳದ ಮುನ್ನ ಹೆಮ್ಮೈಸಿ ಬಿದ್ದಳಂಗನೆ ಧರೆಗೆ ನಡುನಡುಗುತ ॥
ಮಱೆದಳಂಗೋಪಾಂಗವಂ ಬಳಿಕ ಸೌಮಿತ್ರಿ ।
ಮರುಗಿ ತಣ್ಣೀರ್ದಳಿದು ಪತ್ರದೊಳ್ ಕೊಡೆವಿಡಿದು ।
ಸೆರಗಿಂಪ ಬೀಸಿ ರಾಮನ ಸೇವೆ ಸಂದುದೇ ತನಗೆಂದು
ಬೋಧಿಸಿದನು ॥ ೧೫ ॥

ಒಯ್ಯನರೆಗಳಿಗೆಯೊಳ್ ಕಣ್ದೆರೆದು ದೈನ್ಯದಿಂ ।
ಸುಯ್ಯೆಲರನುರೆ ಸೂಸಿ ಸೌಮಿತ್ರಿಯಂ ನೋಡಿ ।
ಕೊಯ್ಯಲೊಲ್ಲದೆ ಕೊರಳನಿಂತು ತನ್ನಂ ಬಿಡಲ್ ಮಾಡಿದಪರಾಧಮಾಂಟೆ॥
ಕಯ್ಯಾರೆ ಖಡ್ಗಮುಂ ಕೊಟ್ಟು ತನ್ನರಸಿಯಂ ।
ಹೊಯ್ಯೆಂದು ಪೇಳದಡವಿಗೆ ಕಳುಹಿ ಬಾಯೆಂದ ।
ನಯ್ಯಯ್ಯೊ ರಾಘವಂ ಕಾರುಣ್ಯನಿಧಿಯೆಂದಳಲ್ದಳಂಭೋಜ ನೇತ್ರೆ ॥ ೧೭ ॥
ಬಿಟ್ಟನೆ ರಘುಶ್ರೇಷ್ಠನೆನ್ನನಕಟಕಟ ತಾ ।
ಮುಟ್ಟನೆ ನೆಗಳ್ದ ಬಾಳ್ಕೆಗೆ ಸಂಚಕಾರಮಂ ।
ಕೊಟ್ಟನೆ ಸುಮಿತ್ರಾ ತನುಜ ಕಟ್ಟರಣ್ಯದೊಳ್ ಕಳುಹಿ ಬಾಯೆಂದು ನಿನಗೆ॥
ಕೊಟ್ಟನೆ ನಿರೂಪಮಂ ತಾನೆನ್ನ ಕಣ್ಗಟ್ಟಿ ।
ಗೆಟ್ಟನೆ ಮನೋವಲ್ಲಭನನಗಲ್ದಡವಿಯೊಳ್ ।
ನೆಟ್ಟನೆ ಪಿಶಾಚದವೊಲೆಂತಿಹೆನೊ ಕೆಟ್ಟೆನಲ್ಲಾಯೆಂದೊರಲ್ದಳಬಲೆ ॥ ೧೮ ॥
ಎಂದು ಕೌಶಿಕ ಮುನಿಪನೊಡನೆ ಮಿಥಿಳಾಪುರಕೆ ।
ಬಂದು ಹರಧನುವ ಮುರಿದೆನ್ನಂ ಮದುವೆಯಾದ ।
ನಂದು ಮೊದಲಾಗಿ ರಮಿಸಿದನೆನ್ನೊಳಾನಗಲ್ದೊಡೆ ತಾಂ ನವೆದನಲ್ಲದೆ ॥
ಒಂದಿದನೆ ಸೌಖ್ಯಮಂ ರಾಮನೆನಗಾಗಿ ಕಪಿ ।
ವೃಂದಮಂ ನೆರಪಿ ಕಡಲಂ ಕಟ್ಟಿ ದೈತ್ಯರಂ ।
ಕೊಂದಗ್ನಿಮುಖದೊಳ್ ಪರೀಕ್ಷಿಸಿದನೆನ್ನೊಳಪರಾಧಮಂ
ಕಾಣಿಸಿದನೆ ॥ ೧೯ ॥
ಕಲ್ಮುಳ್ಳಿಡಿದ ಕಾಡೊಳಂ ನೆನ್ನನುಪಚರಿಸಿ ।
ಪಲ್ಮೊರೆದು ಗರ್ಜಿಪ ವಿರಾಧನಂ ಮರ್ದಿಸಿದೆ ।
ಬಲ್ಮೆಯಿಂ ನಾಂ ಕಳುಹಿದೊಡೆ ಜನಸ್ಥಾನದಿಂ ಪೋದೆ ರಾಘವನ ಬಳಿಗೆ ॥
ನಲ್ಮೆಯುಂ ಮರೆದಪನೆ ಸೌಮಿತ್ರಿ ನೀನೆಲ್ಲ ।
ರೊಲ್ ವೈದುನನೆ ತನಗೆ ಕಾನನದೊಳೆನ್ನ ನಿಲಿ ।
ಪಲ್ ಮನಂ ಬಂದಪ್ಪುದೆ ತಂದೆ ನಿನಗೆಂದು ಕಂಬನಿ
ಮಿಡಿದಳಂಬುಜಾಕ್ಷಿ ॥ ೨೦ ॥

ತೊಳಪ ನಾಶಿಕಗ ನುಣ್ಗದಪುಗಳ ಪೊಳೆವ ಕಂ ।
ಗಳ ತುರುಗಿದೆವೆಯು ನಿಡು ಪುರ್ಬುಗಳ ಪೆರೆ ನೊಸಲ ।
ಥಳಥಳಿಪ ಮಕುಟದ ಕಿವಿಯ ಮಕರ ಕುಂಡಲದ ಕೋಮಲಿತ
ಚಿಬುಕಾಗ್ರದ ॥
ಲಲಿತಾರುಣಾಧರದ ಮಿರುಗುವ ರದನಪಙ್ಕ್ತಿ ।
ಗಳ ಸೂಸುವೆಳನಗೆಯ ಮೋಹನದ ಚೆಲ್ವಿನೋ ।
ಬ್ಬುಳಿಯೆನಿಪ ರಾಘವನ ಸಿರಿಮೊಗವನೆಂತು ನೋಡದೆ
ಮೂರ್ಛೆನಕಟೆಂದಳು ॥ ೨೧ ॥

ರಾಮನಂ ಭುವನಾಭಿರಾಮನಂ ಗುಣರತ್ನ ।
ಧಾಮನಂ ರಘುಕುಲೋದ್ದಾಮನಂ ರೂಪ ಜಿತ ।
ಕಾಮನಂ ಸತ್ಕೀರ್ತಿಕಾಮನಂ ಶರಣ ಜನ ಪಾರ್ಥಿಯುಂ ಮಿಗೆ ಪೆರ್ಚಿಪ ॥
ಸೋಮನಂ ಸೌಭಾಗ್ಯ ಸೋಮನಂ ಕುವಲಯ ।
ಶ್ಯಾಮನಂ ನಿಜತನು ಶ್ಯಾಮನಂ ಘನಪುಣ್ಯ ।
ನಾಮನಂ ಸಂತತಂ ನಾ ಮನಂದಣಿಯೆ ರಮಿಸದೆ ಬಾಳ್ವೆನೆಂತೆಂದಳು ॥ ೨೨ ॥

ರಾಯ ಕೇಳಿಂತಿಂತು ರಾಘವೇಶ್ವರನ ರಮ ।
ಣೀಯ ಗುಣ ಮಾಲೆಯುಂ ನೆನೆನೆನೆದು ಹಂಬಲಿಸು ।
ತಾಯತಾಂಬಕಿ ಮತ್ತೆ ಮೈಮರೆಯುತೆಚ್ಚರುತ ಪಾವಗದ
ಪಸುಳೆಯೊಲಿರೆ ॥
ತಾಯೆ ನಿನ್ನಂ ಬಿಟ್ಟು ಪೋಗಲಾರೆನು ಪೋಗ ।
ದೀಯವಸ್ಥೆಯೊಳಿರ್ದೊಡಣ್ಣ ನೇಗೈದಪನೊ ।
ಹಾಯೆಂದು ಲಕ್ಷ್ಮಣಂ ಶೋಕ ಗದ್ಗದನಾಗೆ ಸೀತೆ
ಮಗುಳಿಂತೆಂದಳು ॥ ೨೩ ॥

ತಂದೆ ಲಕ್ಷ್ಮಣ ನಿನ್ನೊಳಿಂದೊಡಿನ್ನೇನಹುದು ।
ಹಿಂದಣ ಜನಸ್ಥಾನದಂದದೊಳ್ ಪೋಗು ನೀಂ ।
ಕೊಂದುಕೊಂಬೊಡೆ ತನ್ನ ಬೆಂದೊಡಲೊಳಿದೆ ಬಸಿರದಂದುಂಗು
ಕಾನನದೊಳು ॥

ಬಂದುದಂ ಕಾಣ್ಬೆನಾನಿಂದು ಕೌಸಲೆಯಡಿಗೆ।
ವಂದಿಸಿದೆನಪರಾಧವೊಂದುವಿಲ್ಲದೆ ತನ್ನ।
ಕಂದನೆನ್ನಂ ತೊರೆದುದಂ ದೇವಿಗೊರೆವುದೆನುತಂದಳಲ್ದಳ್
ಮೃಗಾಕ್ಷಿ ॥ ೨೪ ॥

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ।
ಕಾಕುತ್ಸ್ಥನಿಲ್ಲಿ ತಳುವಿದೊಡೆ ನೆರವುಂಟು ತನ।
ಗೀಕಾಡೊಳುಗ್ರ ಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು॥
ಲೋಕದರಸೇಗೈದೊಡಂ ತನ್ನ ಕಿಂಕರರ್।
ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ।
ರೀ ಕೆಲಸಕೊಪ್ಪಿಗರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥ ೨೫ ॥

ಆರಿರ್ದೊಡೇಗೈವರಿಗು ತನ್ನ ಮರುಳಾಟ।
ಮಾ ರಾವಣನ ತಮ್ಮನೈಸಲೆ ವಿಭೀಷಣಂ।
ಭೀರುಗಳನರಿದಪನೆ ಸೋದರಂಗುರೆ ಮುಳಿದ ಸುಗ್ರೀವನೆಂಬವಂಗೆ॥
ಕಾರುಣ್ಯಮಿರ್ದಪುದೆ ಮತ್ತುಳಿದ ಮಂತ್ರಿಗಳ।
ದಾರುಂಟು ಪೇಳುವರ್ ದೇವಂಗೆ ನೀನೊಪ್ಪಿ।
ಘೋರಾಟವಿಗೆ ಕೊಂಡುಬಂದೆ ಕಳುಪುವೊಡಿನ್ನೊರಲ್ದೊಡೇ
ನಹುದೆಂದಳು ॥ ೨೬ ॥

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ।
ಕಡುಪಾತಕಂಗೈದು ಪೆಣ್ಣಾಗಿ ಸಂಭವಿಸಿ।
ಪೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು॥
ನಡೆ ಪೋಗು ನಿಲ್ಲದಿರ್ ನಿನಗೆ ಮಾರ್ಗದೊಳಾಗ।
ಲಡಿಗಡಿಗೆ ಸುಖಮೆಂದು ಸೀತೆ ಕಂಬನಿಗಳಂ।
ಮಿಡಿದಾರ್ತೆಯಾಗಿರಲ್ ಸೌಮಿತ್ರಿ ನುಡಿದನಾ ವಿಪಿನದ
ಭಿಮಾನಿಗಳ್ಗೆ ॥ ೨೭ ॥

ಎಲೆ ವನಸ್ಥಳಗಳಿರ ವೃಕ್ಷಂಗಳಿರ ಮೃಗಂ ।
ಗಳಿರ ಕ್ರಿಮಿಕೀಟಂಗಳಿರ ಪಕ್ಷಿಗಳಿರ ಲತೆ ।
ಗಳಿರ ತೃಣಗುಲ್ಮಂಗಳಿರ ಪಂಚಭೂತಂಗಳಿರ ದೆಸೆಗಳಿರ ಕಾವುದು ॥
ಎಲೆ ಧರ್ಮದೇವತೆ ಜಗಜ್ಜನನಿ ಜಾಹ್ನವಿಯೆ ।
ಸಲಹಿಕೊಳ್ಳುದು ತನ್ನ ಮಾತೆಯಂ ಜಾನಕಿಯ ।
ನೆಲೆ ತಾಯೆ ಭೂದೇವಿ ನಿನ್ನ ಮಗಳಿಹಳೆಂದು ಸೌಮಿತ್ರಿ
ಕ್ಕೈಮುಗಿದನು || ೨೮ ||

ಮಾಳ್ಕೆ ಯಿನ್ನೆನ್ನವುದಿಬ್ಬಗೆಯಾಗಿ ತನ್ನೊಡಲ ।
ಸೀಳ್ದಡಹಬೇಡವೆ ಧರಿತ್ರಿಯೊಳ್ ನಿಷ್ಠುರದ ।
ಬಾಳ್ಕೆಯಂ ಸುಡಲೆನುತ ದೇವಿಯಂ ಬಲವಂದು ಲಕ್ಷ್ಮಣಂ
ನಮಿಸಿ ಬಳಿಕ ॥
ಬೀಳ್ಕೊಂಡು ನಡೆಯಲ್ಕೆ ಹಿಂದು ಹಿಂದಕೆ ಮನಂ ।
ನೀಳ್ಕೊಳಿಗೊಳಲ್ಕೆಂದುಮಗಲದಣ್ಣನ ಕಡೆಗೆ ॥
ದೂಳ್ಕಾಯದೊಳ್ ಪತ್ತಿ ಪೊರಳ್ವ ಸೀತೆಯ ಕಡೆಗೆ ತೂಗುಯ್ಯಲಿ
ವೊಲಾದನು ॥ ೨೯ ॥

ನಡೆಗೊಳಲ್ ಕಂಡು ಬಾಯ್ಮಾರ್ವಳಂ ಚೀರ್ವಳಂ ।
ಕಡಲಿಡುವ ಕಂಬನಿಯೊಳಾಳ್ವಳಂ ಬೀಳ್ವಳಂ ।
ಪುಡಿಯೊಳ್ ಪೊರಳ್ದು ಬಸವಳಿವಳಂ ಸುಳಿವಳಂ ಭರತಾವರಜನಗಲ್ದು ||
ಅಡಿಗಡಿಗೆ ತಿರುತಿರುಗಿ ನೋಡುವಂ ಬಾಡುವಂ ।
ಬಿಡದೆ ಬಿಸುಸುಯ್ದು ಬೆಂಡಾದಪಂ ಪೋದಪಂ ।
ಪೊಡೆಮರಳ್ವಂ ನಿಲ್ವನಳಲುವಂ ಬಳಲುವಂ ಬಟ್ಟೆಯೊಳ್
ದಿಟ್ಟಿಗೆಟ್ಟು ॥ ೩೦ ॥

ತಾಯನೆಳಗರು ಬಿಚ್ಚುವಂತೊಯ್ಯನೊಯ್ಯನ ।
ತ್ಯಾಯಾಸದಿಂದಗಲ್ದುಮರನದಿಯಂ ದಾಂಟಿ ।
ರಾಯ ಕೇಳ್ ದುಃಖಾರ್ತನಾಗಿ ಸೌಮಿತ್ರಿಸಾಗಿದನತ್ತಲಿವಳಿತ್ತಲು ||

ಬಾಯಾರಿ ಕಂಗೆಟ್ಟು ಲಕ್ಷ್ಮಣನ ತಲೆ ಮಸುಳ ।
ಲಾಯೆಂದೊರಲ್ದು ಭಯಶೋಕದಿಂ ಬಸವಳಿದು ।
ಕಾಯವುಂ ಮರೆವವನಿಗೊರಗಿದಳ್ ಮೂಲವುಂ ಕೊಯ್ದೆಳೆಯ
ಬಳ್ಳಿಯಂತೆ ॥ ೩೧ ॥

ಅರಸ ಕೇಳಲ್ಲಿರ್ದ ಪಕ್ಷಿ ಮೃಗ ಜಂತುಗಳ್ ।
ಧರಣಿಸುತೆಯಂ ಬಳಸಿ ನಿಂದು ಮೈಯುಡುಗಿ ಜೋ ।
ಲ್ಲಿರದೆ ಕಂಬನಿಗರೆದು ನಿಜವೈರವಂ ಮರೆದು ಪುಲ್ಮೇವುಗಳನೆ ತೊರೆದು ॥
ಕೊರಗುತಿರ್ದುವು ಕೂಡೆ ವೃಕ್ಷ ಲತೆಗಳ್ ಬಾಡಿ ।
ಸೊರಗುತಿರ್ದುವು ಶೋಕ ಭಾರದಿಂ ಕಲ್ಗಳುಂ ।
ಕರಗುತಿರ್ದುವು ಜಗದೊಳುತ್ತಮರ ಹಾನಿಯುಂ ಕಂಡು
ಸೈರಿಸುವರುಂಟೆ ॥ ೩೨ ॥

ಮೊರೆಯಲೊಲ್ಲವು ತುಂಬಿ ಕುಣಿಯಲೊಲ್ಲವು ನವಿಲ್ ।
ಬೆರೆಯಲೊಲ್ಲವು ಕೋಕಿ ನಡೆಯಲೊಲ್ಲವು ಹಂಸೆ ।
ಕರೆಯಲೊಲ್ಲವು ಪಿಕಂ ನುಡಿಯಲೊಲ್ಲವು ಶುಕಂ ನಲಿಯಲೊಲ್ಲವು
ಚಕೋರಿ ॥
ನೆರೆಯಲೊಲ್ಲವು ಹರಿಣಿ ಯೊಲೆಯಲೊಲ್ಲವು ಕರಿಣಿ ।
ಪೊರೆಯಲೊಲ್ಲವು ಚಮರಿ ಮೆರೆಯಲೊಲ್ಲವು ಸಿಂಗ ।
ಮರರೆ ಜಾನಕಿಯ ಶೋಕಂ ತಮ್ಮದೆಂದಾಕೆಯಂಗಮಂ
ನೋಡಿ ನೋಡಿ ॥ ೩೩ ॥

ಬೀಸಿದುವು ಬಾಲದೊಳ್ ಚಮರಿಗಳ್ ಚಮರಮಂ ।
ಪಾಸಿದುವು ಕರಿಗಳೆಳದಳಿರ ಮೃದು ತಲ್ಪಮಂ ।
ಸೂಸಿದುವು ಸಾರಸಂಗಳ್ ತಮ್ಮ ಗರಿಗಳಂ ತೋದು ತಂದಂಬುಗಳನು ॥
ಆ ಸಿರಿಮೊಗಕ್ಕೆ ಬಿಸಿಲಾಗದಂತಾಗಸದೊ ।
ಳೋಸರಿಸದಂಚೆಗಳೆರಂಕೆಯನಗಲ್ಚಿ ನೆಳ ।
ಲಾಸೆಗೈದುವು ರಾಘವನ ರಾಣಿ ದುಃಖ ಸಂತಪ್ತೆಯಾಗಿರುತಿರಲ್ಕೆ ॥ ೩೪ ॥

ಸುರ ನದಿಯು ತೆರೆತೆರೆಯು ನಡುನಡುವೆ ಬಿದ್ದೆದ್ದು ।
ಬರಲಾರದಿರ್ದೊಡಂ ಮತ್ತೆ ಗಂಗೆಯೊಳಲ ।
ರ್ದರವಿಂದ ಗಂಧದತಿಭಾರಮಂ ಪೊರಲಾರದಿರ್ದೊಡಂ ಧರಣಿಸುತೆಯ ॥

ಪರಿತಾಪಮಂ ತವಿಸದಿರಬಾರದೆಂದು ತರ ।
ಹರದೊಳೊಯ್ಯೊಯ್ಯನೈತಂದು ಬೀಸಿತು ಸುಖ ।
ಸ್ಪರುಶ ವಾತಂ ಜಗದೊಳುಪಕಾರಿಯಾದವಂ ತನ್ನ ನೋವಂ
ನೋಳ್ಪನೆ ॥ ೩೫ ॥

ಪೃಥಿವಿಯಾತ್ಮಜೆ ಬಳಿಕ ಚೇತರಿಸಿ ತನಗಿನ್ನು ।
ಪಥಮಾವುದೆಂದು ದೆಸೆ ದೆಸೆಗಳಂ ನೋಡಿ ಸಲೆ ।
ಶಿಥಿಲಮಾದವಯವದ ದೂಳಿಡಿದ ಮೆಯ್ಯ ಬಿಡುಮುಡಿಯ ವಿಕೃತಿಯ
ನೆಣಿಸದೆ ॥

ಮಿಥಿಲೇಂದ್ರ ವಂಶದೊಳ್ ಜನಿಸಿ ರಘುಕುಲದ ದಶ ।
ರಥ ನೃಪನ ಸೊಸೆಯಾಗಿ ತನಗೆ ಕಟ್ಟಡವಿಯೊಳ್ ।
ವ್ಯಥಿಸುವಂತಾಯ್ತು ಕಟ ವಿಧಿಯೆಂದು ಹಲುಬಿದಳ್ ಕಲ್ಮರಂ
ಕರಗುವಂತೆ ॥ ೩೬ ॥

ಕೇಣಮಂ ಬಿಟ್ಟಾತ್ಮ ಘಾತಕದೊಳೀ ಕ್ಷಣಂ ।
ಪ್ರಾಣಮಂ ತೊರೆದಪೆನೆ ಬಂದಪುದು ಗರ್ಭದಿಂ ।
ಭ್ರೂಣಹತ್ಯಾ ದೋಷಮೇಗೈವೆನಾಗೋರಿವೆನೆಂದೊಯ್ಯನೆಟ್ಟು ಬಳಿಕ ॥
ಏಣಾಕ್ಷಿ ನಡೆದಳಡವಿಯೊಳುಪಲ ಕಂಟಕ ।
ಶ್ರೇಣಿಗಳ್ ಸೋಂಕಿ ಪೊಲ್ಲಡಿಗಳಿಂ ಬಸಿವ ನವ ।
ಶೋಣಿತಂ ನೆಲದೊಳ್ ಪೊನಲ್ವರಿಯಲರಸ ಕೇಳ್
ಪೆಣ್ಣೊಡಲ್ವಿಡಿಯಬಹುದೆ ॥ ೩೭ ॥

ಅನ್ನೆಗಂ ಮಖಕೆ ಸಮಿಧಕುಶವನರಸುತಾ ಬನಕೆ ।
ಸನ್ನುತ ತಪೋಧನಂ ವಾಲ್ಮೀಕಿ ಮುನಿವರಂ ।
ತನ್ನ ಶಿಷ್ಯರ್ವೆರಸಿ ನಡೆತಂದು ಕಾಡೊಳೊರ್ವಳೆ ಪುಗಲ್ದೆಸೆಗಾಣದೆ ॥

ಬನ್ನದಿಂ ಬಗೆಗೆಟ್ಟು ಪಾಡಳಿದು ಗ್ರೀಷ್ಮ ಋತು ।
ವಿನ್ನವೆದ ಕಾಂತಾರವಧಿದೇವಿ ತಾನೆನಲ್ ।
ಸನ್ನ ಗದ್ಗದ ಕಂಠೆಯಾಗಿ ರೋದಿಸುತಿರ್ದ ವೈದೇಹಿಯಂ ಕಂಡನು ॥೩೮॥

ಆರಿವಳಿದೇತಕಿರ್ದಪಳೀ ವನಾಂತರದೊ ।
ಳಾರೈವೆನಿದನೆಂದು ನಡೆತಂದು ಕರುಣದಿಂ ।
ದಾ ಋಷಿ ನುಡಿಸಿದನೆಲೆ ತಾಯೆ ನೀನಾವಳೌ ಕಂಡುಕುರುಪಾಗಿರ್ಪುದು ॥

ಘೋರತರ ಗಹನಕೊರ್ವಳೆ ಬಂದೆಯೆಂತಕಟ ।
ಭೀರು ಹೇಳೌ ಬೆದರಬೇಡ ವಾಲ್ಮೀಕಿ ನಾಂ ।
ಭೂರಿ ಶೋಕಾರ್ತರಾಗಿರ್ದರಂ ಕಂಡು ಸುಮ್ಮನೆ
ಪೋಪನಲ್ಲೆಂದನು ॥ ೩೯ ॥

ಹರುಷವೊತ್ತರಿಸಿದುದು ಶೋಕವಿಮ್ಮಡಿಸಿದುದು ।
ಬೆರಸಿದುದು ಲಜ್ಜೆ ಭೂಮಿಜೆಗಂದು ಗದ್ಗದ ।
ಸ್ವರದಿಂದ ಸೀತೆ ತಾಂ ಲೋಕಾಪವಾದಕಪರಾಧಿಯಲ್ಲದ ತನ್ನನು ॥

ತರಣಿಕುಲ ಸಂಭವಂ ಬಿಟ್ಟನೆಂದೀ ವನದೊ ।
ಳಿರಿಸಿ ಪೋದಂ ಸುಮಿತ್ರಾತ್ಮಜಂ ಜೀವಮಂ ।
ಪರಿಯುವೇಳ್ಪೊಡೆ ಗರ್ಭವೊಡಲೊಳಿಹುದೇವೆನೆಂದೆರಗಿದಳ್ ಮುನಿ
ಪದದೊಳು ॥ ೪೦ ॥

ದೇವಿ ಬಿಡು ಶೋಕಮಂ ಪುತ್ರ ಯುಗಮಂ ಪಡೆವೆ ।
ಭಾವಿಸದಿರಿನ್ನು ಸಂದೇಹಮಂ ಜನಕಂಗೆ ।
ಸಾವನ್ನರಲ್ಲ ನಮ್ಮಾಶ್ರಮಕೆ ಬಂದು ನೀಂ ಸುಖದೊಳಿರ್ದೊಡೆ ನಿನ್ನನು ॥

ಆವಾವ ಬಯಕೆಯುಂಟೆಲ್ಲಮಂ ಸಲಿಸಿ ತಾ ।
ನೋವಿಕೊಂಡಿರ್ಪೆನಂಜದಿರೆಂದು ಸಂತೈಸಿ ।
ರಾವಣಾರಿಯ ರಾಣಿಯಂ ನಿಜತಪೋವನಕೆ ವಾಲ್ಮೀಕಿ
ಕರೆತಂದನು ॥ ೪೧ ॥

ಚಿತ್ರಮಯವಾಗಿ ಕಟ್ಟಿತು ಪರ್ಣಶಾಲೆ ಶತ ।
ಪತ್ರ ಲೋಚನೆಗೆ ಬಳಿಕಲ್ಲಿ ಋಷಿಪತ್ನಿಯರೆ ।
ಮಿತ್ರತ್ವಮಂ ತಳೆದು ವಾಲ್ಮೀಕಿ ಮುನಿಪನಾದರಯ್ಕೆಯಿಂ ಸೀತೆ ತನ್ನ ॥
ಪುತ್ರೋದಯದ ಕಾಲಮಂ ನೋಡುತಿರ್ದಳ್ ಧ ।
ರಿತ್ರಿಯೊಳ್ ದೃಢ ಪತಿವ್ರತೆಯರ್ಗೆ ನಿರ್ಮಲ ಚ ।
ರಿತ್ರಮೆಂತಾದೊಡಂ ವಿಪರೀತವಾದಪುದೆ ಭೂಪಾಲ ಕೇಳೆಂದನು ॥ ೪೨ ॥

ಜಾತಿ ವೈರಂಗಳಿಲ್ಲದ ಪಕ್ಷಿ ಮೃಗದ ಸಂ ।
ಘಾತದಿಂ ಋತುಭೇದವಿಲ್ಲದ ಲತಾದ್ರುಮ ।
ವ್ರಾತದಿಂ ಪಗಲಿರುಳ ಶಂಕೆಯಿಲ್ಲದ ಪೂಗೊಳಂಗಳ ವಿಕಾಸದಿಂದ ॥
ಶೀತೋಷ್ಣದಾಸರಿಲ್ಲದ ಸುಸ್ಥಳಂಗಳಿಂ ।
ಪ್ರೀತಿ ವಿರಹಿತ ದುಃಖ ಸುಖದ ಜಂಜಡವಿಲ್ಲ ।
ದಾ ತಪೋವನದೊಳಗೆ ಋಷಿವಧುಗಳೊಡನೆ ವೈದೇಹಿ
ಪದುಳದೊಳಿರ್ದಳು ॥ ೪೩ ॥

ಮುನಿವಟುಗಳೆಡೆಯಾಡಿ ಪರಿಚರಿಯುಮಂ ಮಾಳ್ಪ ।
ರಿನಿದಾದ ವಸ್ತುವಂ ಋಷಿವಧುಗಳಿತ್ತಪರ್ ।
ತನತನಗೆ ಸತ್ಕರಿಸುವರ್ ತಾಪಸೋತ್ತಮನ್ ವಾಲ್ಮೀಕಿ ಸಾದರದೊಳು ॥
ದಿನದಿನಕೆ ಬೇಕಾದ ಬಯಕೆಯಂ ಸಲಿಸುವಂ ।
ಬನದೊಳಿಂತಿರುತಿರ್ದಳವನಿಸುತೆ ರಘುಪೇಂ ।
ದ್ರನ ಚರಣ ಕಮಲ ಯುಗಮಂ ಧ್ಯಾನಿಸುತ ಮರೆದಳಖಿಳ
ರಾಜ್ಯಶ್ರೀಯನು ॥ ೪೪ ॥

ಅವನಿಜೆಯ ಗರ್ಭಕ್ಕೆ ತುಂಬಿದುದು ನವಮಾಸ ।
ದವಧಿ ಬಳಿಕೊಂದಿರುಳ್ ಶುಭಲಗ್ನದೊಳ್ ಪಡೆದ ।
ಳವಳಿ ಮಕ್ಕಳನುಪಚರಿಸೆ ವಿದಗ್ಧಾಂಗನೆಯರಾ ಸೂತಿಕಾ ಗೃಹದೊಳು ॥

ತವಕದಿಂದೈತಂದು ಮುನಿವಟುಗಳುಸಿರಲು ।
ತ್ಸವದಿಂದ ವಾಲ್ಮೀಕಿ ಮುನಿ ಬಂದು ನೋಡಿ ಕುಶ ।
ಲವದಿಂದ ಸೇಚನಂಗೈದು ಕುಶಲವರೆಂದು ಪೆಸರಿಟ್ಟನರ್ಭಕರ್ಗೆ ॥ ೪೫ ॥

ದೆಸೆಗಳ್ ಪ್ರಸನ್ನತೆಯೊಳೆಸೆದುವಾಗಸದೊಳುಡು ।
ವಿಸರಂಗಳೊಪ್ಪಿದುವು ಪೂಸಗಂಪಿಡಿದು ಗಾಳಿ ।
ಪಸರಿಸಿತು ತವೆ ಸುಪ್ರದಕ್ಷಿಣದೊಳುರಿದುದಗ್ನಿಜ್ವಾಲೆ ಕಡಲುಕ್ಕಿತು ॥
ವಸುಧೆ ಸಲಿದುದು ತಿಳಿದು ಪರಿದುವು ನದಿಗಳಂದು ।
ಶಶಿ ರವಿಗಳುದಯಿಸಿದರೇಕಕಾಲದೊಳೆನಲ್ ।
ಶಿಶುಗಳಾಶ್ರಮದ ಮುನಿಗಳ ಕಣ್ಗೆ ಕಾಣಿಸಿದರೊಸಗೆ
ಮೂಜಗಕಾಗಲು ॥ ೪೬ ॥

ಬಾಲದೊಡಿಗೆಗಳೆಲ್ಲವುಂ ತೊಡಿಸಿ ನೋಡುವಂ ।
ಬಾಲಲೀಲೆಗಳನಾಡಿಸಿ ಮುದ್ದುಮಾಡುವಂ ।
ಬಾಲಕರ್ಗೆನಿವಾದ ವಸ್ತುವಂ ಕೊಡುವಂ ತನ್ನ ತೊಡೆ ಮಡಿಲೊಳಿಟ್ಟು ॥
ಲಾಲಿಸುವನಾವಗಂ ಜಪತಪಸಮಾಧಿಗಳ ।
ಕಾಲಮುಂ ಬಗೆಯದೆ ಮುನೀಶ್ವರಂ ಕುಶಲವರ ।
ಮೇಲಣಕ್ಕರೊಳಿರ್ದನಾಶ್ರಮದೊಳುತ್ಸವಂ ಪೆರ್ಚಿದುದು ದಿನ
ದಿನದೊಳು ॥ ೪೭ ॥

ದಶರಥ ನೃಪಾಲಸುತನರಮನೆಯ ಬೆಳವಿಗೆಯ ।
ಶಿಶುಗಳ್ಗೆ ಕಾಂತಾರವಾಸದೊಳ್ ಸವೆವ ಕ ।
ರ್ಕಶಮಿದೆತ್ತಣದೆಂದು ಮಿಥಿಲೇಂದ್ರ ಸಂಭೂತೆ ಚಿತ್ತದೊಳ್
ಮರುಗದಂತೆ
ವಿಶದಮಾನಸನಾಗಿ ವಾಲ್ಮೀಕಿ ಮುನಿವರಂ ।
ಕುಶಲವರನೋವಿದಂ ವಿವಿಧವೈಭವದಿಂದ ।
ಶಶಧರನ ಕಳೆಯ ತೆರದೊಳು ರಾಘವಾತ್ಮಜರ್ ದಿನದಿನಕೆ
ವರ್ಧಿಸಿದರು ॥ ೪೮ ॥

ಜೆಲ್ವೆರಡು ರೂಪಾಯ್ತೊ ವಿಮಲತೆ ಕವಲ್ತುದೋ ।
ಗೆಲ್ವಡೆಸೆ ಗೆಳೆಗೊಂಡಡರ್ದಪುದೊ ಕೀರ್ತಿಯು ಮ ।
ಡಲ್ವಸುಧೆಯೊಳ್ ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಜೆಳೆದ
ಪಸುಗೆಯೊ ॥
ಸಲ್ವ ಕುಲದೇಳ್ಗೆಯು ಸಸಿಯು ಕೋಡೊ ಮೋಹನದ ।
ಬಲ್ವೊನಲ ಸವಡಿಯೋ ಸೊಗಸಿನವಳಿಯು ಫಲವೊ ।
ಸೊಲ್ವಿಡಲ್ ಪೊಸತೆನಲ್ ಕುಶಲವರ್ ಕುಶಲದಿಂ
ಕಣ್ಗೆಸೆದರಾಶ್ರಮದೊಳು ॥ ೪೯ ॥

ತೊಟ್ಟಿಲೊಳ್ ನಲಿವ ನೆವವಿಲ್ಲದೆ ನಗುವ ಬಾಯ್ಗೆ ।
ಬಟ್ಟಕ್ಕಿ ಪೀರ್ವ ಪಸಿದೊಡೆ ಚೀರ್ವ ಮೊಲೆಯುಂಬ ।
ಪಟ್ಟಿರಿಸೆ ಪೊರಳ್ವಂಬೆಗಾಲಿಡುವ ಮೊಳೆವಲ್ಲ ಜೊಲ್ಲುಗೆ ತೊದಳಿಸಿ
ನುಡಿವ ॥
ದಟ್ಟಡಿಯಿಡುವ ನಿಲ್ವ ತೊಡರ್ವ ಬೇಡುವ ಪರಿವ ।
ಬಟ್ಟೆಯೊಳೊರಗುವ ಕಾಡುವ ಕುಣಿವ ಲೀಲೆಯುಂ ।
ನೆಟ್ಟನೆ ಕುಮಾರಕರ್ ತೋರಿದರ್ ಜಾನಕಿಗೆ ವಾಲ್ಮೀಕಿ
ಮುನಿವರಂಗೆ ॥ ೫೦ ॥

ಬಿಡದೆ ಪಾಲ್ ಪೀರ್ವುದಂ ತಣಿದುಪ್ಪೋರಗೆ ಮಕ್ಕ ।
ಳೊಡನೆ ಧೂಳಾಟ ಮೊದಲಾದ ಲೀಲೆಗಳ ಪರಿ ।
ವಿಡಿಯಿಂದೆಸೆವ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ॥
ತೊಡಗಿಸಿದನಕ್ಷರಾಭ್ಯಾಸಮಂ ಬಳಿಕ ನಡೆ ।
ನುಡಿಯು ಜಾಣ್ಮೆಯು ಕಲೆಯು ರಾಜ ಲಕ್ಷಣದ ಚೆ ।
ಲ್ವಿಡಿದ ಲಲಿತಾಂಗದಿಂ ಕುಶಲವರ್ ಕುಶಲವರ್ಧನರಾಗಿ
ರಂಜಿಸಿದರು ॥ ೫೧ ॥

ಶ್ರೀ ಮಾಧವನ ಮನೋಹರದ ಸೌಂದರ್ಯಮಂ ।
ಕಾಮಜನಕನ ಕಾಮನೀಯ ಲಾವಣ್ಯಮಂ ।
ರಾಮಚಂದ್ರನ ರಮಣೀಯಕದ ರೂಪಮಂ ತಾಳ್ದೊಗೆದ ಸುಕುಮಾರರ್॥

ಕೋಮಲಾಂಗದ ಸೊಬಗನಭಿವರ್ಣಿಸುವರುಂಟೆ ।
ಭೂಮಿಯೊಳ್ ಚೆಲ್ವಿಗೆ ವಸಂತನಂ ಮದನನಂ ।
ಸೋಮನಂ ಪಡಿಯಿಡಲ್ ಪುನರುಕ್ತಮಪ್ಪುದೆನೆ ಕುಶಲವರ್
ಕಣ್ಗೆಸೆದರು ॥ ೪೨ ॥

ದ್ವಾದಶಾಬ್ದದ ಮೇಲೆ ಮುನಿಪಂ ಕುಮಾರರ್ಗೆ ।
ವೇದೋಕ್ತದಿಂದಲುಪನಯನಂಗಳಂ ಮಾಡಿ ।
ಭೂದೇವ ನಿಕರಕೆ ವಸಿಷ್ಠನೊಳ್ ವರ ಕಾಮಧೇನುವಂ ಬೇಡಿ ತಂದು ॥
ಆದರಿಸೆ ಭೋಜನ ಸುಗಂಧಾನ್ನತೆಗಳಿಂದ ।
ಲಾದುದತಿ ವಿಭವದಿಂದುತ್ಸವಂ ಬಳಿಕ ತರು ।
ಣಾದಿತ್ಯ ಸನ್ನಿಭರ್ ತೊಳಗಿದರ್ ಜಾನಕಿಯ ಚಿತ್ತಕಾನಂದವಾಗೆ ॥೪೩॥

ಸರ್ವ ಕರ್ಮದ ವಿಧಿಯನಖಿಳ ನಿಗಮದ ಕಡೆಯು ।
ನುರ್ವ ಶಾಸ್ತ್ರದ ಬಗೆಯನುದಿತ ಧರ್ಮದ ನೆಲೆಯು ।
ನುರ್ವೀಶ ನೀತಿಗಳ ನಿಶ್ಚಯವನೈದೆ ಸಾಂಗೋಪಾಂಗವಾಗಿ ಬರಿಸಿ ॥
ತರ್ವಾಯೊಳಾ ಕುಮಾರರ್ಗೆ ಮುನಿನಾಥಂ ಧ ।
ನುರ್ವೇದಮಂ ಶಿಕ್ಷೆಗೈದು ರಾಮಾಯಣವ ।
ನಿರ್ವರುಂ ಪಾಡುವಂತೋದಿಸಿದನತಿ ಮಧುರ ಭಾವದಿಂ
ತುದಿವೊದಲ್ಗೆ ॥ ೪೪ ॥

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ ।
ಳಾ ತಪೋವನದ ಮುನಿಗಣಮೈದೆ ಕೊಂಡಾಡ ।
ಲಾ ತರುಣರಿರ್ವರುಂ ಮಧುರ ವೀಣೆಗಳ ಮೇಳಾಪದಾಲಾಪಂಗಳ ॥
ಗೀತದೊಳ್ ಸಂಕೀರ್ಣ ಶುದ್ಧ ಸಾಳಂಗದಿ ಲ ।
ಯಾತಿಶಯಮೆಸೆ ಪಾಡುವರ್ ದೇವನಗರೀನಿ ।
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವನನುದಿನದೊಳು ॥೪೫॥

ಚೆಲ್ವೆರಡು ರೂಪಾಯ್ತೊ ವಿಮಲತೆ ಕವಲ್ತುದೋ ।
ಗೆಲ್ವದೆಸೆ ಗೆಳೆಗೊಂಡಡರ್ದಪುದೊ ಕೀರ್ತಿಯು ಮ ।
ಡಲ್ವಸುಧೆಯೊಳ್ ದ್ವಿಧಾಕೃತಿಯಾಯ್ತೊ ಸಂತಸದ ಬೆಳಸಿನ ಬೆಳೆದ
ಪಸುಗೆಯೊ ॥
ಸಲ್ವ ಕುಲದೇಳ್ಗೆಯು ಸಸಿಯು ಕೋಡೊ ಮೋಹನದ ।
ಬಲ್ವೊನಲ ಸಪಡಿಯೋ ಸೊಗಸಿನವಳಿಯು ಫಲವೊ ।
ಸೊಲ್ವಿಡಲ್ ಪೊಸತೆನಲ್ ಕುಶಲವರ್ ಕುಶಲದಿಂ
ಕಣ್ಗೆಸೆದರಾಶ್ರಮದೊಳು ॥ ೪೯ ॥

ತೊಟ್ಟಿಲೊಳ್ ನಲಿವ ನೆವವಿಲ್ಲದೆ ನಗುವ ಬಾಯ್ಗೆ ।
ಬೆಟ್ಟಕ್ಕಿ ಪೀರ್ವ ಪಸಿದೊಡೆ ಚೀರ್ವ ಮೊಲೆಯುಂಬ ।
ಪಟ್ಟಿಂಸೆ ಪೊರಳ್ವಂಬೆಗಾಲಿಡುವ ಮೊಳೆವಲ್ಲ ಜೊಲ್ಲುಗೆ ತೊದಳಿಸಿ
ನುಡಿವ ॥
ದಟ್ಟಡಿಯಿಡುವ ನಿಲ್ವ ತೊಡರ್ವ ಜೇಡುವ ಪರಿವ ।
ಜಟ್ಟಿಯೊಳೊರಗುವ ಕಾಡುವ ಕುಣಿವ ಲೀಲೆಯಂ ।
ನೆಟ್ಟನೆ ಕುಮಾರಕರ್ ತೋರಿದರ್ ಜಾನಕಿಗೆ ವಾಲ್ಮೀಕಿ
ಮುನಿವರಂಗೆ ॥ ೫೦ ॥

ಬಿಡದೆ ಪಾಲ್ ಪೀರ್ವುದಂ ತಣಿದುವ್ವೊರಗೆ ಮಕ್ಕ ।
ಳೊಡನೆ ಧೂಳಾಟ ಮೊದಲಾದ ಲೀಲೆಗಳ ಪರಿ ।
ವಿಡಿಯಿಂದೆಸೆವ ಕುಮಾರರ್ಗೆ ಮುನಿಪತಿ ಚೌಲಕರ್ಮಂಗಳಂ ಮಾಡಿಸಿ॥
ತೊಡಗಿಸಿದನಕ್ಷರಾಭ್ಯಾಸಮಂ ಬಳಿಕ ನಡೆ ।
ನುಡಿಯು ಜಾಣ್ಮೆಯು ಕಲೆಯು ರಾಜ ಲಕ್ಷಣದ ಚೆ ।
ಲ್ವಡಿದ ಲಲಿತಾಂಗದಿಂ ಕುಶಲವರ್ ಕುಶಲವರ್ಧನರಾಗಿ
ರಂಜಿಸಿದರು ॥ ೫೧ ॥

ಶ್ರೀ ಮಾಧವನ ಮನೋಹರದ ಸೌಂದರ್ಯಮಂ ।
ಕಾಮಜನಕನ ಕಾಮನೀಯ ಲಾವಣ್ಯಮಂ ।
ರಾಮಚಂದ್ರನ ರಮಣೀಯಕದ ರೂಪಮಂ ತಾಳ್ದೊಗೆದ ಸುಕುಮಾರರ॥

ಕೋಮಲಾಂಗದ ಸೊಬಗನಭಿವರ್ಣಿಸುವರುಂಟೆ ।
ಭೂಮಿಯೊಳ್ ಚೆಲ್ವಿಗೆ ವಸಂತನಂ ಮದನನಂ ।
ಸೋಮನಂ ಪಡಿಬಿಡಲ್ ಪುನರುಕ್ತಮಪ್ಪುದೆನೆ ಕುಶಲವರ್
ಕಣ್ಗೆಸೆದರು ॥ ೫೨ ॥

ದ್ವಾದಶಾಬ್ದದ ಮೇಲೆ ಮುನಿಪಂ ಕುಮಾರರ್ಗೆ ।
ವೇದೋಕ್ತದಿಂದಲುಪನಯನಂಗಳಂ ಮಾಡಿ ।
ಭೂದೇವ ನಿಕರಕೆ ವಸಿಷ್ಠನೊಳ್ ವರ ಕಾಮಧೇನುವಂ ಬೇಡಿ ತಂದು ॥
ಆದರಿಸೆ ಭೋಜನ ಸುಗಂಧಾಕ್ಷತೆಗಳಿಂದ ।
ಲಾದುದತಿ ವಿಭವದಿಂದುತ್ಸವಂ ಬಳಿಕ ತರು ।
ಣಾದಿತ್ಯ ಸನ್ನಿಭರ್ ತೊಳಗಿದರ್ ಜಾನಕಿಯ ಚಿತ್ತಕಾನಂದವಾಗೆ ॥೫೩॥

ಸರ್ವ ಕರ್ಮದ ವಿಧಿಯನಖಿಳ ನಿಗಮದ ಕಡೆಯ ।
ಸರ್ವ ಶಾಸ್ತ್ರದ ಬಗೆಯನುದಿತ ಧರ್ಮದ ನೆಲೆಯ ।
ನುರ್ವೀಶ ನೀತಿಗಳ ನಿಶ್ಚಯವನೈದೆ ಸಾಂಗೋಪಾಂಗವಾಗಿ ಬರಿಸಿ ॥
ತರ್ವಾಯೊಳಾ ಕುಮಾರರ್ಗೆ ಮುನಿನಾಥಂ ಧ ।
ನುರ್ವೇದಮಂ ಶಿಕ್ಷೆಗೈದು ರಾಮಾಯಣವ ।
ನಿರ್ವರುಂ ಪಾಡುವಂತೋದಿಸಿದನತಿ ಮಧುರ ಭಾವದಿಂ
ತುದಿವೊದಲ್ಗೆ ॥ ೫೪ ॥

ಸೀತೆ ನಲಿವಂತೆ ವಾಲ್ಮೀಕಿ ಮೆಚ್ಚುವ ತೆರದೊ ।
ಳಾ ತಪೋವನದ ಮುನಿಗಣವೈದೆ ಕೊಂಡಾಡ ।
ಲಾ ತರುಣರಿರ್ವರುಂ ಮಧುರ ವೀಣೆಗಳ ಮೇಳಾಪದಾಲಾಪಂಗಳ ॥
ಗೀತದೊಳ್ ಸಂಕೀರ್ಣ ಶುದ್ಧ ಸಾಳಂಗದಿ ಲ ।
ಯಾತಿಶಯಮೆನೆ ಪಾಡುವರ್ ದೇವನಗರೀನಿ ।
ಕೇತನ ಶ್ರೀಪತಿಯ ಚಾರಿತ್ರಮಪ್ಪ ರಾಮಾಯಣವನನುದಿನದೊಳು ॥೫೫॥



ಲಘುಟಿಪ್ಪಣಿ.

ಜೈಮಿನಿ ಭಾರತ

ಹದಿನೆಂಟನೆಯ ಸಂಧಿ.

ಸೂಚನೆ—ಸಾಮ್ರಾಜ್ಯ-ಚಕ್ರವರ್ತಿಯಪದವಿ, ತಾಳ್ದು-ಧರಿಸಿ, ಆ ಮ್ರಪ್ರವಾಳ-ಮಾವಿನಚಿಗುರು, ತಾಮ್ರಾಧರೆ- ಕೆಂಪುತುಟಿಯುಳ್ಳವಳು, ಸೀಮಂತಮಣಿ-ಚೂಡಾಮಣಿ (ಹೆಚ್ಚಿನವಳು.)

೧. ಅವನಿಜಾಪತಿ-ಭೂಮಿಯಲ್ಲಿ ಹುಟ್ಟಿದವಳ ಒಡೆಯ (ರಾಮ), ಸಂಗರ-ಕಾಳಗ, ಕೌತುಕ-ಆಶ್ಚರ್ಯ, ಅಪನಿತು-ಸಾಧ್ಯವಾದಮಟ್ಟಿಗೆ, ಒರೆವೆನು-ಹೇಳುವೆನು, ವ್ಯಾಪಿಸಿದ-ತುಂಬಿದ, ನೆಲೆವನೆ-ಬೀಡು, ಅಭಿಧಾನ-ಹೆಸರು,ಪುತ್ರಕಾಮೇಷ್ಟಿ-ಪುತ್ರನನ್ನು ಬಯಸಿಮಾಡುವಯಾಗ.

೨. ತೊಳೆದು-ಪವಿತ್ರಗೊಳಿಸಿ, ಭವನ-ಮನೆ, ತಳೆದು-ಭಾರವಹಿಸಿ, ಕೌಶಿಕ-ವಿಶ್ವಾಮಿತ್ರ, ಮಖ-ಯಜ್ಞ, ಒರಸಿ-ನಾಶಮಾಡಿ, ಮುನಿಸತಿಯ-ಅಹಲ್ಯೆಯ, ಅಘ-ಪಾಪ, ಭಾರ್ಗವ-ಪರಶುರಾಮ, ಸೆಳೆದು-ಖಂಡಿಸಿ, ಉತ್ಸವ-ಆನಂದ.

೩. ವರ್ಧಿಪ-ಬೆಳೆಯುತ್ತಿರುವ, ಮೂರ್ಧಾಭಿಷೇಚನ-ಪಟ್ಟಾಭಿಷೇಕ, ಅನುಗೆಯ್ಯೆ-ಸಿದ್ಧವಾಗಲು ಅರ್ಧಾಂಗಿ-ಪತ್ನಿ, ಸ್ಪರ್ಧಾವ-ಸ್ವರ್ಗ ಅಡರೆ-ಹತ್ತಲು, ದುರ್ಧರ-ಘೋರ, ಸ್ಪರ್ಧಿಸುವ-ಎದುರಿಸುವ, ಓವಿ-ಕಾಪಾಡಿ, ಕಾಕುತ್ಸ್ಥ-ರಾಮ.

೪. ಅಂಡಲೆಯಲು–ಪೀಡಿಸಲು, ಭಂಗಿಸಿ–ಮಾನಭಂಗಮಾಡಿ, ವ್ಯಾಜ–ನೆವ, ಬೆಂಡಾಗಿ–ನಿಸ್ಸತ್ವನಾಗಿ, ವಿರಹ–ಅಗಲಿಕೆ, ಪ್ರೊಲಬು–ಸುದ್ದಿ.

೫. ಪಥ–ದಾರಿ, ಸಲಿಸಿ–ಪೂರ್ಣಮಾಡಿ, ಕೈಗೊಟ್ಟು–ಸಹಾಯ ಮಾಡಿ, ಮಥಿಸಿ–ಸಂಹರಿಸಿ, ಕಥನಕೆ–ಹೇಳಿಕೆಗೆ, ನೆರಪಿ–ಒಟ್ಟುಗೂಡಿಸಿ, ಪೃಥಿವಿಜೆ–ಸೀತೆ.

೬. ಧಿಂಕಿಟ್ಟು–ಹಾರಿ, ಅಂಕಿತದ–ಗುರುತಿನ, ಬೀಳ್ಕೊಂಡು–ಅಪ್ಪಣೆಹೊಂದಿ, ನಿಶ್ಶಂಕೆಯೊಳು–ಭೀತಿಯಿಲ್ಲದೆ, ಕಿಳ್ತು–ಕಿತ್ತು ಸದೆದು–ಹೊಡೆದು, ಮರ್ದಿಸಿ–ನಾಶಮಾಡಿ, ಅಂಕ–ಯುದ್ಧ, ಅಂಕೆ–ಅಪ್ಪಣೆ, ವಾಲಧಿ–ಬಾಲ, ಒಸಗೆ–ಸುದ್ದಿ, ಅನಿಲಜ–ವಾಯುಪುತ್ರ (ಹನುಮ), ಅಸುರಾರಿ–ರಾಮ.

೭. ಗಣನೆ–ಎಣಿಕೆ. ಪರಿಗ್ರಹಿಸಿ–ತೆಗೆದುಕೊಂಡು,ಹಣಿದಪಾಡು–ಹೊಡೆ, ಉರವಣಿಸಿ–ಅಬ್ಬರದಿಂದ, ಧೂಳಿಕೋಂಟೆ–ಧೂಳಿಯಾದಕೋಟೆ.

೮. ಪದ–ಪಟ್ಟ, ಪಾವಕ–ಅಗ್ನಿ, ಸೌಮಿತ್ರ–ಲಕ್ಷ್ಮಣ, ಅವರಜ–ತಮ್ಮ, ಗಡಣ–ಸಮುದಾಯ, ದೂಪಾಳಿಸಿದನು–ತ್ವರೆಯಿಂದಬಂದನು, ಪುಷ್ಪಕ–ವಿಮಾನ.

೯. ಸತ್ಕರಿಸಿ–ಮನ್ನಿಸಿ, ಐದೆ–ಚನ್ನಾಗಿ ಮಾತೃಜನ–ತಾಯಂದಿರು, ಪರಿಜನ–ಸೇವಕರು, ಪ್ರಕೃತಿ–ಪ್ರಜೆ, ಹಾರೈಸಿ–ಬಯಸಿ, ಕೃಶ–ಬಡವು, ಅಭಿನಂದಿಸು–ನಮಸ್ಕಾರಮಾಡು.

೧೦. ಕೈದಳ–ಜಿಂಗೈ, ಒಯ್ಯಗೆ–ಮೆಲ್ಲನೆ, ಘನಸ್ನೇಹ–ಬಹಳಪ್ರೀತಿ, ಮುಯ್ದುಡವಿ–ಮೈಮೇಲೆಕಯ್ಯಾಡಿಸಿ, ತನಯ–ಮಗ, ತಕ್ಕೈಸಿ–ಅಪ್ಪಿಕೊಂಡು, ಕಯ್ದು–ಆಯುಧ, ಕರಗು–ದುಃಖಿಸು, ಒಡಲು–ಹೊಟ್ಟೆ, ಸುಯ್ದು–ನಿಟ್ಟುಸುರಬಿಟ್ಟು, ಮುಗ್ಧಭಾವ–ಮೂಢರೀತಿ, ಸಂತೈಸು–ಸಮಾಧಾನ ಮಾಡು.

೧೧. ವಾರಿನಿಧಿ–ಸಮುದ್ರ, ಅವನಿ–ಭೂಮಿ, ಗೀರ್ವಾಣ–ದೇವತೆಗಳು. ಉರ್ವೀ–ಭೂಮಿ, ಓಲೈಸು–ಸೇವಿಸು, ಚಯ–ಸಮುದಾಯ.

೧೨. ಯೂಪ–ಯಜ್ಞದಕಂಬ, ಜಾತರೂಪ–ಬಂಗಾರ, ಶುಕ–ಗಿಳಿ ಪಿಕ–ಕೋಗಿಲೆ, ಆಲಾಪ–ಮಾತು (ಧ್ವನಿ), ವರ್ಧಿಪ–ಬೆಳೆಯುವ, ಗೋಪ–ದನಕಾಯುವವರು, ಪ್ರದೀಪ–ಹೆಚ್ಚಾದಕಾಂತಿ, ಪ್ರತಾಪ–ಪರಾಕ್ರಮ.

೧೩. ತಳಿರ್–ಚಿಗುರು, ಬೀತ–ಮುಗಿದುಹೋದ, ಕೊಳ–ಸರೋವರ, ಕಾಲ್ವೆ–ಕಾಲುವೆ, ಆಚಾರ–ನಡತೆ, ಬಿಣ್ಗೆಚ್ಚಲ್–ಬೊಡ್ಡಕೆಚ್ಚಲು, ಕೊಡವಾಲ್ಗರೆವ–ಕೊಡಹಾಲುಹಿಂಡವ, ಅವು–ಆಕಳು, ಸುಣ್ಣಾಡಿ–ಮನೋಹರವಾದರೀತಿ, ಅಕಾಲ–ಅವೇಳೆ.

೧೪. ಕಾಳಿಂದಿ–ಯಮುನೆ, ಸುರನದಿ–ದೇವಗಂಗೆ, ಅಮೃತಾಬ್ಧಿ–ಕ್ಷೀರಸಮುದ್ರ, ಅಳಕಾಳಿ–ಮುಂಗುರುಳು, ವಾಣಿ–ಮುಖ, ಕಳಂಕು–ಕಪ್ಪುಕಲೆ, ಇಂದುಮಂಡಲ–ಚಂದ್ರಬಿಂಬ, ಕಾಳಿ–ಕಾಳಿಕಾದೇವಿ, ಕಾಪಾಲಿಗೆ–ಈಶ್ವರನಿಗೆ, ಮದ–ಸೊಕ್ಕು, ದೇವಗಜ–ಐರಾವತ. ನಂಜು–ವಿಷ ಅಹಿಪತಿ–ಶೇಷ, ತೊಡವು– ಆಭರಣ, ಕಾಳಿಮ–ಕಪ್ಪು, ಕೂಟ–ಸಂಬಂಧ ಮುಳಿಸು–ಸಿಟ್ಟು, ಅತಿಪಿಕಾಳಿಸಲ್–ಬಹಳಹೆಚ್ಚಲು, ಅಮಲ–ನಿರ್ಮಲವಾದ, ಕೀರ್ತಿಕಾಂತೆ-ಕೀರ್ತಿಯೆಂಬಸ್ತ್ರೀ, ಲೋಕಾಳಿ-ಲೋಕಗಳಸಮೂಹ.

೧೫. ಸಮೃದ್ಧಿ–ಹೆಚ್ಚಳ, ಪ್ರಕೃತಿ–ಪ್ರಜೆ, ಚಾತುರ್ವರ್ಗ–ಬ್ರಾಹ್ಮಣ, ಕ್ಷತ್ರಿಯಮೊದಲಾದ ನಾಲ್ಕುಜಾತಿ, ಪಳಿಪೊರಿಸು–ನಿಂದೆಯನ್ನುಹೊರಿಸು, ಉರ್ವಿ–ಭೂಮಿ, ಅಬ್ದ–ವರ್ಷ, ಉರ್ವರ–ಶ್ರೇಷ್ಠ, ಸಂತಾನ– ಮಕ್ಕಳು ನಿರ್ವಾಹ–ಉದ್ಧಾರ, ಏಕಾಂತದಿಂ–ಗುಪ್ತವಾಗಿ.

೧೬. ಅಂತುಮ–ಸಿಂತಿತು, ಕುಲಾಂತಕ–ಕುಲನಾಶಕ, ಅಪತ್ಯ–ಮಕ್ಕಳು, ಏಳ್ಗೆಗೆ–ಹೆಚ್ಚಿಗೆಗೆ, ವಿಶ್ರಾಂತಿ–ಕೊನೆ, ಪೆರತು–ಎರಡನೆಯದು, ಪುತ್ರಾಂತರ–ಮಗ, ಬಿಸುಸುಯ್ದನು–ಉಸುರುಗರೆದನು.

೧೭. ಸಂತಾನವುಂ-ಮಕ್ಕಳನ್ನು, ದಾರದೊಳ್ ಪಡೆದು-ಹೆಂಡತಿಯಲ್ಲಿಪಡೆದು, ಸಂತಾನ-ವಂಶವೆಂಬ, ಮಂದಾರದೊಳ್ ಪಡೆದ-ಮಂದಾರವೃಕ್ಷದಲ್ಲಿಹೊಂದಿದ, ಅತುಳವಿಭವ-ಎಣೆಯಿಲ್ಲದಸಂಪತ್ತು, ನಂದನ-ಸ್ವರ್ಗದವನ, (೨) ಮಗ, ಉತ್ಸವ-ಹರುಷ, ಸುಮ್ಮಾನ-ಆನಂದ, ಜಾತರೂಪ-ಮಗ, ಬಂಗಾರ, ತೊಳಲಿ-ಸುತ್ತಿ. ಬಳಲುವ-ಕಷ್ಟಪಡುವ.

೧೮. ಕಾಸಾರ-ಸರೋವರ, ಅರವಿಂದ-ಕಮಲ, ತಾರಕೆ-ನಕ್ಷತ್ರ, ಚಾರು-ಮನೋಹರ, ಇನಿಯ-ಪತಿ, ಧಾರಿಣಿ-ಭೂಮಿ,-ಉದಾರ-ಶ್ರೇಷ್ಠ.

೧೯. ಜನ್ಮಾಂತರದ-ಪೂರ್ವಜನ್ಮದ, ಐಸಲೆ-ಅಲ್ಲವೆ, ನೋಂತಡಲ್ಲದೆ-ವ್ರತಮಾಡದಿದ್ದರೆ, ಆಂತು-ಧರಿಸಿ, ಪುದುಗಿರ್ಪ-ಅಡಗಿರುವ, ಲತಾಂತ-ಹೂ, ಕುಟ್ಮಲ-ಮೊಗ್ಗೆ, ಲಾಂಛನ-ಗುರ್ತು, ತಳೆವುದು-ಧರಿಸುವದು.

೨೦. ಕಂದ-ಮಗು, ತೊದಲೊಂದಿದಿನಿಮಾತು-ತೊದಲಿನಿಂದಕೂಡಿದಸವಿಮಾತು, ನಳಿ-ಕೋಮಲವಾದ, ಕೆಂಗುರುಳು-ಕೆಂಪುಕೂದಲು, ಆಘ್ರಾಣಿಸಿ-ಮೂಸಿನೋಡಿ, ಚೆಂದುಟಿಯು-ಕೆಂಪುತುಟಿಯು, ಬಾಯ್ದೆರೆಯ-ಬಾಯಿಗೆತೆರೆಯದಾಗಿರುವ, ಕುಂದದ-ಕಡಿಮೆಯಾಗದ, ಕೃತರೊ-ಪುಣ್ಯವಂತರೊ.

೨೧. ತೇಲ್ದು-ಮೆಲ್ಲನೆ, ಓಸರಿಸಿ-ಓರೆಮಾಡಿ, ಮೇಲುದ-ಸೆರಗು, ಸೆಳೆವ-ಜಗ್ಗುವ, ಬಿದಿರಿ-ಕೊಡವಿ, ತಡವರಿಸಿ-ಕಯ್ಯಾಡಿಸಿ, ಜೋಲ್ದೊಲೆವ-ಜೋತಾಡುವ, ಸುದು-ಸರಿಸಿ, ಸಾರ್ಚಿ-ತೆಗೆದು, ಪಾಲ್ದೊರೆವ-ಹಾಲುಸುರಿಯುವ, ಊಡಿ-ಉಣಿಸಿ, ಸಾಲ್ದಸೈಪು- ವಿಶೇಷಪುಣ್ಯ.

೨೨. ಅಸರ್-ಆಲಸ್ಯ, ಅಭ್ಯುದಯ-ಏಳ್ಗೆ, ಸಂತೈಸೆ-ಸಮಾಧಾನಮಾಡಲು, ರಸಾಲ-ಸೀಮಾವು.

೨೩. ಅರಸಂಚೆ-ರಾಜಹಂಸ, ಕಲಪಿತ-ಮಧುರಧ್ವನಿಯಕೋಗಿಲೆ, ತಳಿತ-ಚಿಗಿತ, ತತಿ-ಗುಂಪು, ಚಂದ್ರಿಕೆ-ಬೆಳದಿಂಗಳು ಅಳಿಕುಲ-ಗುಂಗೀಹುಳಗಳಸಮೂಹ, ಬಿರಿಮುಗುಳ್ ಅರಳುವಮೊಗ್ಗೆ. ಕೂರ್ಪಾಳಂ-ಪ್ರಿಯರನ್ನು ಸಾರ್ದ-ಸೇರ, ಎಸೆಯಲು-ಶೋಭಿಸಲು, ಎಳಗಾಳಿ-ಮಂದಮಾರುತ, ಪರಿವೃತ-ಆಗುಮಿಸಿದ.

೨೪. ಮಲ್ಲಿಕಾಸ್ಮಿತರುಚಿಕೆ ಮಲ್ಲಿಗೆಯಹುವಿನಂತೆಮುಗುಳುನಗೆಯಿಂದ ಶೋಭಿಸುವವಳು, ಕುಂದಕುಟ್ಮಲರದನೆ-ಮೊಲ್ಲೆಯಮೊಗ್ಗಿನಂತೆ ಹಲ್ಲುಳ್ಳವಳು, ಪಲ್ಲವಾಧರೆ-ಚಿಗುರಿನಂತೆ ತುಟಿಯುಳ್ಳವಳು, ಭೃಂಗ-ಭ್ರಮರ, ಕುಂತಳೆ-ಕೂದಲುಳ್ಳವಳು, ಸಲ್ಲಲಿತ-ಒಪ್ಪುವ, ಆಲಾಪೆ-ಮಾತುಳ್ಳವಳು, ಕೀರ-ಗಿಳಿ, ಫುಲ್ಲ-ಅರಳಿದ, ಲಸತ್-ಒಪ್ಪುವ, ಸಮುಲ್ಲಾಸ-ಬಹಳಸಂತೋಷ. ವಿಕಸಿತ-ಅರಳಿದ.

೨೫. ಮೊತು-ಮುಡಿಬಸ್ಕೆ, ಮೂಡಿದ-ಹುಟ್ಟಿದ, ಸೊಗಡುಗಂಪು-ಉತ್ತಮವಾಸನೆ, ಒಗೆದ-ಹೊರಚಲ್ಲುವ, ತೊಡವು-ಆಭರಣ, ಬಳದ್ದುರುಬು-ಜೋತಾಡುವತುರುಬು, ನಿಜ್ಜಳದ-ಸ್ಥಿರವಾದ, ಕಣ್ಮಲರ್-ಹೂವಿನಂತಿರುವಕಣ್ಣು, ಮಿರುಗದಪು-ಹೊಳೆಯುವಗಲ್ಲ, ಬಿಣ್ಪಿಡಿದ-ಭಾರವಾದ, ಸೆಕೆಸಿಡಿವ-ತಿರಸ್ಕರಿಸುವ, ನಿರಿಯುಳಿಯುದ- ಅಂಬರ-ಬಟ್ಟೆ, ಕುಡಿವರಿದ-ಹೆಚ್ಚುತ್ತಿರುವ, ಮಿಗಿಲು-ಅತಿ.

೨೬. ಸಮುಚಿತ-ಯೋಗ್ಯ, ಅಮಲಮಜ್ಜನ-ನಿರ್ಮಲಸ್ನಾನ, ಮಸೆದ-ಹದನಾಗಿಮಾಡಿದ, ಕಲುಷ-ಹೊಲಸು, ಯಶಃಶ್ರೀ-ಕೀರ್ತಿಲಕ್ಷ್ಮಿ, ಸಾಕಾರ-ಆಕೃತಿ.

೨೭. ಸ್ಫುರತ-ಹೊಳೆಯುವ, ಉತ್ಕಟಾಕ್ಷ, ಚಂಚಲದಿಂದ-ಚಂಚಲವಾದಕಡೆಗಣ್ಣೋಟದಿಂದ, ವಿಸ್ತಾರವಾದಮಿಂಟೆನಿಂದ; ಚಾರು-ಸುಂದರ, ಪೀವರ-ಪುಷ್ಟವಾದ, ಪಯೋಧರ-ಮೊಲೆ; ಮೇಘ, ಪರಿವೃತಸುಮೇಖಲಾ-ಧರಿಸಿದಒಡ್ಯಾಣವ; ಸುತ್ತುಗಟ್ಟಲ್ಪಟ್ಟಕಣವ, ತರಳ-ಅಲ್ಲಾಡುವ,

ಕಿಂಕಿಣಿ–ಕಿರುಗೆಜ್ಜೆ, ಸ್ವನರವ–ದೊಡ್ಡಧ್ವನಿ; ಮೋಡದಧ್ವನಿ, ಕಂಕಣ–ಕೈಬಳೆ; ನೀರಪಸಿ, ಲಾವಣ್ಯಪೂರಪ್ರವಾಹ ಲಾವಣ್ಯಗವಿಳ್ಗೆಯೆಂಬ ಜಲಪ್ರವಾಹದಿಂದ, ಕಬರೀಬರಿಸ–ಮುಡಿಯೆಂಬನವಿಲು, ಮನಸ್ಸಾಲದ–ಮನಸ್ಸೆಂಬಚಾಲಕ.

೨೮. ಮಂದಹಾಸ–ಮುಗುಳುನಗೆ, ಕುಂದದ–ಕಡಿಮೆಯಾಗದ, ಕುಂದರದನೆ–ಮೊಲ್ಲೆಯಮೊಗ್ಗೆಯಂತೆ ಹಲ್ಲುಳ್ಳವಳು, ವಕ್ರಕುಂತಳೆ–ಉಂಗುರುಗೂದಲುಳ್ಳವಳು, ವಕ್ರಾವಲೋಕನ–ಓರೆನೋಟ, ಆಸ್ಯ–ಮುಖ, ಎಸಕ–ಉದ್ಯೋಗ, ಬಂದುಗೆ–ದಾಸಿವಾಳ, ಬಂಧುರ–ಮನೋಹರ.

೨೯. ನೊಸಲೊಳುರಾಜಿಸುವ–ಹಣೆಯಲ್ಲಿಶೋಭಿಸುವ, ಅಲಕ–ಮುಂಗುರುಳು, ಮಿಸುಪ–ಹೊಳೆಯುವ, ಸಮುದೀರ್ಪ–ಸ್ವಪ್ರಕಾಶಿಸುವ, ವಸನ–ವಸ್ತ್ರ, ದಶನ–ಹಲ್ಲು, ತೆಳ್ಗದಪು–ನುಣುಪಾದಗಲ್ಲ, ಪದಪಿನಿಂದ ಪುರ್ದ–ಪ್ರೀತಿಯಿಂದ ತುಂಬಿದ, ಅಸಿವೆರಳು–ಸಣ್ಣಬೆರಳು, ತಿಗುರ್–ಅನುಲೇಪನ, ಕಂಪು–ಸುವಾಸನೆ, ಇಂಪು–ಮನೋಹರ, ತ್ರಿಸರ–ಮೂರೆಳೆಯಹಾರ, ಕಚ–ಹೆಳಲು,

೩೦. ಪಜ್ಜಳಿಪ–ಹೊಳೆಯುವ, ಬಜ್ಜರ–ವಜ್ರ, ಅಂಚೆ–ಹಂಸ, ಸಪ್ಜೇದ–ಹೂವಿನಹೆಸರು, ಮೆಲ್ಪಸು–ಮೆತ್ತನೆಯಹಾಸುಗೆ, ಸೆಜ್ಜೆಮನೆ–ಮಲಗುವಮನೆ, ಕಿರು–ಸ್ವಲ್ಪ, ಕಾತರ–ಭೀತಿ, ಪಜ್ಜೆದೋರಲ್–ಕಾಣಿಸಿಕೊಳ್ಳಲು, ಒಯ್ಯನೆ–ಮೆಲ್ಲನೆ,

೩೧. ಫಣಿತಲ್ಪ–ಶೇಷನಹಾಸಿಗೆ, ಲೀಲೆಗೆ–ಕ್ರೀಡೆಗೆ, ಸಾರ್ಥ–ಯೋಗ್ಯ, ರಾಗರಸ–ಪ್ರೇಮರಸ, ಪುಳಕ–ರೋಮಾಂಚನ, ಮದನಾಗಮ–ರತಿಶಾಸ್ತ್ರ, ಪ್ರೌಢಿಮೆಯಿಂ–ಜಾಣತನದಿಂದ, ಇಂಪಾಗಲು–ಮನೋಹರವಾಗಲು, ಐಕ್ಯಭಾವ–ಒಮ್ಮನಸು.

೩೨. ಬೆಂಗೊಡವೆ–ಹೆದರವೆ, ತವಕ–ಆತುರ, ಉಡುಗಿ–ಕಳೆದು, ಜೆರಸಿಂಗದೆ–ಹಿಂಜರಿಯದೆ, ವಿಘಾತಿಗೆ–ಹೊಡೆತಕ್ಕೆ, ಅಳುಕದೆ–ಅಂಜದೆ,

ಇಂಗದೆ–ಕೊರತೆಯಾಗದೆ. ತಳ್ತ–ಕೂಡಿದ, ಅಕ್ಕರ–ಪ್ರೀತಿ. ಅಧೆಗದೆ–ಕುಂದದೆ, ಅಲಸಿಕೆವೋರದೆ–ಆಲಸ್ಯಗಾಣದೆ, ಅಂಗಜ–ಮನ್ಮಥ. ನಿಟ್ಟಿಸದೆ–ನೋಡದೆ, ರಂಜಿಸುವ ಶೋಭಿಸುವ, ಸಂಗರಸ ಪ್ರೇಮರಸ, ಸಂಗಮ–ಯುಗ್ಮ, ಸಲ್ಲಾಪ–ಉತ್ತಮಮಾತು, ಇನಿಸು–ಸ್ವಲ್ಪ.

೩೩. ಸೊಬಗು–ಚಲುವಿಕೆ, ವಿಷ್ಣುನಕ್ಷತ್ರ–ಶ್ರವಣನಕ್ಷತ್ರ, ವೈದೇಹಿ–ಸೀತೆ, ಗರ್ಭಾಧಾನ–ಬಸುರು. ಸೀಮಂತಿನಿ–ಉತ್ತಮಬೈತಲೆಯುಳ್ಳವಳು; ಸೀಮಂತಕಾರ್ಯಕ್ಕೆತಕ್ಕವಳು; ಅಣುಗರಂ–ಮಕ್ಕಳನ್ನು, ಲಾಂಛನ–ಗುರುತು.

೩೪. ಬೆಳೆಯೆ–ದೊಡ್ಡದಾಗಲು ತಿವಳಿ–ಹೊಟ್ಟೆಯಮೇಲಿನಗೆರೆ ತೆಳ್ಪಾಸೆ–ತಿಳುವಾದಹೊಟ್ಟೆ, ಪೊಗರ್ವಡೆಯೆ–ಕಾಂತಿಗೊಳ್ಳಲು, ಉಣ್ಮೆ–ಹೆಚ್ಚಾಗಲು, ತಿಣ್ಣ–ಸಣ್ಣ ಬಿಣ್ಪಡರೆ–ಭಾರವಾಗಲು, ನವಿರ್–ಕೂದಲು. ಗಾಡಿ–ಸೊಬಗು, ವಿಲಸತ್–ಒಪ್ಪುವ, ಸುತಲಾಂಛನ–ಮಗುವಿನಗುರ್ತು

೩೫. ಬೆಳ್ದಾವರೆ–ಬಿಳಿಯಕಮಲ, ಅಳಿ–ಭ್ರಮರ, ಗಗನಾಗ್ರ–ಆಕಾಶದತುದಿ. ದಿಟ್ಟಿಗೊಳಿಸುವ–ಮನೋಹರವಾದ, ಸಿತಾಂಬುದ–ಕರೆಯುನೀರು. ಒಳ್ದಳಿದ–ಶೋಭಿಸುವ, ಕುರುಳ್ಗೊಂಗಲ್–ಉಂಗುರುಗೂದಲುಗಳ ಗುಂಪು, ಅಸನಡು–ಸಣ್ಣನಡು, ನೆಗಳ್ದ–ಪ್ರಸಿದ್ಧವಾದ, ಮಿಸುಪ–ಹೊಳೆಯುವ.

೩೬. ಚಂದ್ರಿಕೆ–ಬೆಳದಿಂಗಳು, ಅಂಗರುಚಿ–ಮೈಕಾಂತಿ, ಒಳ್ಪು–ಸೌಂದರ್ಯ, ಉತ್ಪಲಾಕ್ಷಿ–ಕರಿಯಕಮಲದಂತೆಕಣ್ಣುಳ್ಳವಳು.

೩೭. ಕಾಂಚನಲತಾ–ಬಂಗಾರದಬಳ್ಳಿ, ಇನಕುಲ–ಸೂರ್ಯವಂಶ, ವಾಂಛಿತ–ಜೇಡಿಕೆ, ಪುಂಸವನ–ಗರ್ಭಸಂಸ್ಕಾರ, ವಿಸ್ತರಿಸಿದಂ–ಮಾಡಿಸಿದನು. ಉಕ್ತದಿಂ–ಶಾಸ್ತ್ರರೀತಿಯಿಂದ.

೩೮. ಭೂಸುರ–ಬ್ರಾಹ್ಮಣ, ಉಡುಗೊರೆ–ಬಹುಮಾನ. ಮನ್ನಿಸಿದನು–ಮರ್ಯಾದೆಮಾಡಿದನು.

೩೯. ಅನಿಬರು–ಅಷ್ಟರು, ಶರಣಜನವತ್ಸಲಂ–ಮರೆಹೊಕ್ಕವರನ್ನು
ಕಾಯುವವ, ಕುತ್ಸಿತ–ನಿಂದೆ. ಪ್ರೊರ್ದದ–ಹೊಂದದ, ತವಿಸು–ಕಳೆ,
ಉತ್ಸುಕ–ಉತ್ಸಾಹ.

೪೦. ಕ್ಷಿತಿಜ–ಭೂಸುತೆ, ಆಕ್ಷೇಪ–ಸಂಶಯ, ಕಳೆದು–ದಾಟಿ.
ಕ್ಷೀಣೆಯಾಗಿ–ಬಡವಾಗಿ, ದೇಶಿಗ–ಪರದೇಶಿ, ಈಕ್ಷಿಸು–ನೋಡು.

೪೧. ನೆಗಳ್ಚಿದಂ–ಮಾಡಿಸಿದನು, ಅನುತಾಪ–ಸಂಕಟ, ಆರೈವು
ದು–ರಕ್ಷಿಸುವದು, ಅಲಸಿದಪುದು–ಮಲಗಿರುವದು, ದಿನಪ–ಸೂರ್ಯ,
ಚಾರ–ಆಳು.

೪೨. ನಿಂದಿಸರಲೇ–ನಿಂದಿಸುವದಿಲ್ಲವೆ? ಇನ್ನೆಗಂ–ಈವರೆಗೆ, ಒಂ
ದಿಸು–ಕೂಡಿಸು, ಪಳಿವು–ನಿಂದೆ, ಕಂದಿಸು–ಬಾಡಿಸು. ದೂಸರಿಂದ–ದೂಷ
ಣೆಯಿಂದ, ಕುಂದಿಸು–ತಗ್ಗಿಸು, ಖೋಡಿಗಳೆದು–ದೂಷಿಸಿ, ವಹಮಾನ–ವ
ಯ್ಯುವಿಕೆ, ಕೊಂಕು–ಕುಟಿಲ.

೪೩. ಪೆಸರಿಸು–ಹೆಸರುಹೇಳು, ಈಶ–ಒಡೆಯ, ಈಶ್ವರ; ಚತು
ರ್ಮುಖ–ಬುದ್ಧಿವಂತ, ಬ್ರಹ್ಮ; ಶ್ರೀವಿಭವ–ಸಂಪತ್‌ಶಾಲಿ, ವಿಷ್ಣು; ಶಕ್ರ–
ಇಂದ್ರ, ಆಚಂದ್ರಾರ್ಕ–ಸೂರ್ಯಚಂದ್ರರಿರುವವರೆಗೆ, ತರಣಿ–ಸೂರ್ಯ,
ಕಾವಳ–ಕತ್ತಲೆ.

೪೪. ಕಟಕಿ–ಕಠಿಣ, ಊಣೆ–ಕೊರತೆ, ಅಮ್ಮೆಂ–ಸಮರ್ಥನಾಗಲಾರೆ,

೪೫ ಮಾಜು–ಮುಚ್ಚು, ಒತ್ತಾಯ–ಬಲಾತ್ಕಾರ, ಅವಧರಿಸು–
ಕೇಳು, ಮಲಿನ–ಹೊಲಸು, ಕಾಳುಗೆಡೆದಂ–ನಿಂದಿಸಿದನು, ಪುನೀತ–ಪವಿತ್ರ
ಏಳಿಗೆ–ಹೆಚ್ಚಳ.

೪೬. ಮುಳಿದು–ಸಿಟ್ಟಾಗಿ, ಚೆಂಡಿತನ–ಹಟ, ಅಂಡಲೆ–ಪೀಡಿಸು,
ಕೊಂಡು–ಇಟ್ಟುಕೊಂಡು, ಉದ್ದಂಡ–ಸೊಕ್ಕು, ಅಖಂಡಿತ–ಪರಿಪೂರ್ಣ,
ಪೂತ–ಪವಿತ್ರ, ಹವಿ–ಹೋಮದ್ರವ್ಯ, ವಾಯಸ–ಕಾಗೆ.

೪೭. ಮತ್ತಗಜ-ಸೊಕ್ಕಾನೆ, ಒಲಿಸು-ಆಹ್ಲಾದಿಸಿ, ಸೈವೆರಗಾಗಿ-ಆಶ್ಚರ್ಯಪಟ್ಟು, ದುಮ್ಮಾನ-ದುಃಖ. ಪುತ್ತವುಗುವ-ಹುತ್ತವನ್ನುಪ್ರವೇಶಿಸುವ, ಅಹಿಪ-ಹಾವು.

೪೮. ಓಲಗ-ಸಭೆ, ಚಿಂತಾಲತಾಂಗಿ-ಚಿಂತೆಯೆಂಬಸ್ತ್ರೀ, ಕೇಳಿ-ಕ್ರೀಡೆ, ಆಲಿಂಗಿಸಿದ-ಹತ್ತಿಕೊಂಡ, ಜಾಡ್ಯ-ಆಲಸ್ಯ, ಜಡಿದ-ಮುದುಡಿದ, ನೀಲಾಂಗ-ರಾಮ, ಅಮ್ಮದೆ-ಸಮರ್ಥರಾಗದೆ.

೪೯. ಕರುಣಾಳು-ದಯಾಶೀಲ, ಬಲ್ಲಹ-ಒಡೆಯ, ಪೊದ್ದಿದ-ಬಂದ, ನೆರವಿ-ಜನರಗುಂಪು, ಆಡಿಸಿಕೊಳಲ್ಕೆ-ನಿಂದಿಸಿಕೊಳ್ಳಲು, ಒಡಲಿದ್ದಲ್ಲಿ-ದೇಹವಿರುವವರೆಗೆ, ತಿದ್ದಿತೀರದ-ಕಡಿಮೆಯಾಗದ, ವಿಲಗ-ಅಪವಾದ.

೫೦. ಅಯೋನಿಜೆ-ಎಲ್ಲರಂತೆಹುಟ್ಟದವಳು, ಸಂಪನ್ನೆ-ಕೂಡಿದವಳು, ಮುಕೋತ್ಸವೆ-ಬಹಳಸಂತೋಷವುಳ್ಳವಳು, ಸತ್ಯಭಾಷೆಗೆ-ನಿಜವಾದಮಾತಿಗೆ.

೫೧. ಬಲುಗರ್ಚು-ಬಹಳಹಟ, ನೆಲೆ-ಸ್ಥಿರ, ಪಾಷಂಡಿ-ದೇವರಿಲ್ಲೆಂದುತಿಳಿಯುವವ, ಪೋಣ್ಬರೇ-ಬಿಡುವರೇ, ಕುಲವರ್ಧಿನಿ-ವಂಶೋದ್ಧಾರಕಳು, ಅನುಜಾತ-ಒಡಹುಟ್ಟಿದವರು, ಅಗ್ರಜ-ಅಣ್ಣ.

೫೨. ಗದ್ಗದಿಸೆಕಂಠಂ-ಕುತ್ತಿಗೆಯುಸ್ವರವುನಡುಗಲು, ತುಳುಕೆ-ತುಂಬಲು, ಕರೆವಕಪಿಲೆ-ಹಿಂಡುವಆಕಳು, ಪಾವಕ-ಅಗ್ನಿ, ಅಯ್ಯ-ತಂದೆ, ಆಡನೆ-ಹೇಳಲಿಲ್ಲವೆ, ಕಟಕ-ಸಮೂಹ, ಅರಿಯೆ-ತಿಳಿಯುವಂತೆ.

೫೩. ಹುಲುಮನುಜ-ಕಡಿಮೆಯಮನುಷ್ಯ, ರಜಕ-ಅಗಸ, ದೂಷಣ-ನಿಂದೆ, ಹದನ-ರೀತಿ, ಗುರುಲಘು-ದೊಡ್ಡದುಸಣ್ಣದು, ಅಂತರ-ವ್ಯತ್ಯಾಸ, ಎಣಿಸದೆ-ಆಲೋಚಿಸದೆ, ಎದೆಗೆಟ್ಟು-ಧೈರ್ಯಗುಂದಿ, ಸದುಳ-ಸುಖವಾಗಿ, ಕದುಬಿ-ಒತ್ತಿ.

೫೪. ನಿರಜೆ-ಶುದ್ಧಳು, ಉಮ್ಮಳಿಸು-ದುಃಖಿಸು, ಉಳಿವೆಂ-ಬಿಡುವೆನು, ಹಮ್ಮೈಸಿ-ಎಚ್ಚರದಪ್ಪಿ, ಕಂಪಿಸುತ-ನಡುಗುತ್ತ.

೫೫. ಕಾಯ-ದೇಹ, ಧರ್ಮಕೃತ-ಧರ್ಮಕಾರ್ಯ, ಆಯತಾಕ್ಷಿ-ವಿಸ್ತಾರವಾದಕಣ್ಣುಳ್ಳವಳು, ಭಾವಶುದ್ಧಿ-ಮನಸಿನನಿರ್ಮಲತೆ, ಬಾಯದ-ಸುಳ್ಳು, ಬಿಸಲಾದ-ಹಡೆಯುವಸ್ಥಿತಿಯಲ್ಲಿರುವ, ಆರೈದು-ವಿಚಾರಿಸಿ, ಮೇಲ್ವಾಯ್ದು-ಎದುರಿಸಿ.

೫೬. ಕಡಿವನು-ಇಲ್ಲದಂತೆಮಾಡುವವು, ಏಳ್ಗೆಯ-ಹೆಚ್ಚಳವನು ಪೆಣ್ಣಅಳಲ್-ಹೆಣ್ಣಿನದುಃಖ, ಅನ್ವಯದ-ವಂಶದ, ಉರಿದು-ಕೋಪಗೊಂಡು.

೫೭. ತರಹರಿಸು-ಸೈರಿಸು, ಹೃತ್ಶೂಲ-ಎದೆಯಲಗು, ಪೆರೆಯುಚಿದುರುಗ-ಪೊರೆಯನ್ನುಬಿಟ್ಟಹಾವು, ಒರೆ-ಹೇಳು, ಸೌಮಿತ್ರ-ಲಕ್ಷ್ಮಣ.

೫೮. ಕೆಲಬಲ-ಎಡಬಲ, ಆರಯ್ಯುತ-ವಿಚಾರಿಸುತ್ತ, ತಡಿ-ದಂಡೆ.

೫೯. ರೌರವ-ನರಕದಹೆಸರು, ಎಂದುದೇ-ಹೇಳಿದ್ದನ್ನು, ಉಗ್ರಗತಿ-ಕ್ರೂರಪಾಪ, ಏಗೆಯ್ವೆ-ಏನುಮಾಡಲಿ, ತನು-ಶರೀರ, ಝೋಂಪಿಸು-ಕಂಪಿಸು; ಸೆರೆ-ಕುತ್ತಿಗೆ, ಕಂಬನಿ-ಕಣ್ಣೀರ, ಅಳಲ್ಬೊರೆ-ದುಃಖವೆಂಬಹೊಳೆ, ಅಳ್ದ-ಮುಳುಗಿದ, ಘೂರ್ಣಿಸು-ಹುರಿದುಂಬಿಸು.

೬೦. ಇಡಿದ-ತುಂಬಿದ, ವಾತ್ಸಲ್ಯ-ಪ್ರೇಮ, ಬಲ್ಗಣ್ಣೆ-ಬಲವಾದಹಗ್ಗ, ನಿರ್ವಿಣ್ಣಭಾವ-ದುಃಖದಭಾವ, ಕೇತನ-ಧ್ವಜ, ಹಣ್ಣಿದ-ಸಿದ್ಧವಾದ, ವರೂಥ-ರಥ, ನೆಲವೆಣ್ಣು-ಭೂಮಿಯೆಂಬಸ್ತ್ರೀ.

೬೧. ಎಳಸಿದೆ-ಬಯಸಿದೆ, ಪ್ರಿಯ-ಪ್ರೀತಿ, ಪಣ್ಣಿ-ಸಿದ್ಧವಾಗಿ, ಛಾಯೆಗಾಣಿಸಿ-ಅಭಿಪ್ರಾಯದರೀತಿಯನ್ನುತಿಳಿಸಿ, ಸಂಭ್ರಮಾನ್ವಿತ-ಸಡಗರದಿಂದಕೂಡಿದವಳು, ಆಯತಾಂಬಕಿ-ವಿಸ್ತಾರವಾದಕಣ್ಣುಳ್ಳವಳು, ಅಭೀಪ್ಸೆ-ಬಯಕೆ, ಸಲಿಸು-ನೆರವೇರಿಸು.

೬೨. ಅಂಬುಜಾನನೆ-ಕಮಲಮುಖಿ, ಪಯಣ-ಪ್ರಯಾಣ, ಮುಂಬರಿದು-ಮುಂದಕ್ಕಬಂದು ಬಲವಂದು-ಪ್ರದಕ್ಷಿಣೆಹಾಕಿ, ತುಂಬಿದ-ಪೂ

ರ್ಣ, ಪರಕೆವೆತ್ತು-ಆಶೀರ್ವಾದಪಡೆದು, ಸಂತೈಸಿ-ಸಮಾಧಾನಮಾಡಿ ಬೀಳ್ಕೊಂಡಳು-ಹೊರಟಳು.

೬೩. ಮಿಗೆ-ಹೆಚ್ಚಾಗಿ, ಅನುಲೇಪನ-ಲೇಪಿಸಿಕೊಳ್ಳುವ ಒಡವೆಗಳು, ಅಂಬರ ವಸ್ತ್ರ, ಮಣಿಭೂಷಣ-ರತ್ನದಆಭರಣ, ಇಂಬಿಟ್ಟು-ಕೂಡಿಸಿಟ್ಟು, ಚೆಂಬೊನ್ನ-ಬಂಗಾರದ, ಪಾವುಗೆ-ಪಾವುಗೆ, ಒಗುಮಿಗೆಯ-ಮಿತಿಮೀರಿದ.

೬೪. ತರಿಸಂದ-ನಿಶ್ಚಯಿಸಿ, ಕಜ್ಜಮುಗ್ರಮಂ-ಕಾರ್ಯದಕಠೋರತೆಯನ್ನು, ಸಮಗ್ರ-ಪೂರ್ಣ, ನಿಗ್ರಹಿಸು-ತಡೆ, ವ್ಯಗ್ರದಿಂದ-ಜಾಗರೂಕತೆಯಿಂದ, ದೇವಗ್ರಾಮ-ದೇವಪುರ, ಒಗೆದ-ಹುಟ್ಟಿದ, ಜಾಹ್ನವಿ-ಗಂಗೆ, ತಡಿ-ದಂಡೆ.

:o:

ಹತ್ತೊಂಬತ್ತನೆಯ ಸಂಧಿ.

ಸೂಚನೆ—ರಮಣ-ಪ್ರಿಯ, ತೊರೆದಂ-ಬಿಟ್ಟನು, ಭ್ರಮಿಸುತ-ತಿರುಗುತ್ತ, ಮಿಥಿಳೇಂದ್ರಸುತೆ-ಜನಕರಾಜನಮಗಳು, ತನಯರು-ಮಕ್ಕಳು, ಪದುಳ-ಕ್ಷೇಮ.

೧. ವೈದೇಹಿ-ಸೀತೆ, ಚಲಿಸುವ-ಹಾರಾಡುವ, ಪತಾಕೆ-ಧ್ವಜಪಟ, ಉಳಿದನು-ಬಿಟ್ಟನು, ಕೊಡಹು-ಅಲ್ಲಾಡಿಸು, ದಾರುಣ-ಭಯಂಕರ ನೆರವಿ-ಗುಂಪು, ಕಾತರಿಸು-ಹೆದರು, ಪರಿಸಿದಂ-ಓಡಿಸಿದನು, ಕಾಲ್ವಟ್ಟೆಗೊಂಡು-ಕಾಡುದಾರಿಯನ್ನುಹಿಡಿದು, ಅನಿಲ-ವಾಯು.

೨. ಧುರಮೊಳಾಂತರ-ಯುದ್ಧದಲ್ಲಿ ಎದುರಿಸಿದವರನ್ನು, ಇರಿದು-ತಿವಿದು, ತರಳೆಯಂ-ಸ್ತ್ರೀಯನ್ನು, ಅಡರ್ವಂತೆ-ಹತ್ತುವಹಾಗೆ, ಆರ್ತರ-ದುಃಖಿತರನ್ನು, ಹರಣ-ಪ್ರಾಣ, ನಿಷ್ಠುರ-ಕಾಠಿಣ್ಯ, ಎಸಗು-ತೊಡಗು ಬೆಸಸು-ಅಪ್ಪಣೆಮಾಡು.

೩. ಬಳ್ಳೊರಲ್ದುದು–ನರಿಯುಕೂಗಿತು, ಮೃಗ–ಎರಳೆ, ಅದಿರೆ–ಹಾರಲು, ಅಳ್ಕಿದೆ–ಭೀತಿ, ದುರ್ನಿಮಿತ್ತ–ಅಪಶಕುನ, ಪಥ–ದಾರಿ, ಡಿಕ್ಕ–ಕಳವಳ.

೪. ಅನ್ನೆಗಂ–ಅಷ್ಟರಲ್ಲಿ, ರಘೂದ್ವಹನ–ರಾಮನ, ಮೂವಟ್ಟೆ–ತ್ರಿಲೋಕ, ಮುಕ್ಕಣ್ಣ–ಈಶ್ವರ, ಸಾರ್ದು–ಸೇರಿ, ಮುಕ್ಕಿ–ಒಳಕೊಂತು, ಮುನ್ನೀರ–ಸಮುದ್ರ, ತಾಗಿ–ಸೇರಿ, ವಿಬುಧರು–ದೇವತೆಗಳು, ಅಣಕಿಪ–ತಿರಸ್ಕರಿಸುವ, ಪೆಂಪು–ದೊಡ್ಡಿಸ್ತನ, ಒದವಿ–ತುಂಬಿ, ಬೆಳ್ವೊನಲ್–ಬಿಳಿಯಪ್ರವಾಹ, ದಿವಿಜನದಿ–ದೇವಗಂಗೆ.

೫. ತೆರತೆರದ–ಅನೇಕತರಹದ, ಕಲ್ಲೋಲ–ತೆರೆ, ಕೇಳಿ–ಆಟ, ನೀರ್ವನಿ–ನೀರಿನಹನಿ, ಆಕರ–ಸಮುದಾಯ, ಶೀಕರ–ತುಂತುರಹನಿ, ಬೊಬ್ಬುಳಿ–ಗುರುಳೆ, ಘೂರ್ಣಿಸುವ–ಉಕ್ಕುವ, ಪರಿವು–ಪ್ರವಾಹ, ಗುತು–ಹಾರಾಟ, ನೆರೆವು–ಬಂದು, ಭಾವಿಸುವ–ಧ್ಯಾನಿಸುವ, ಅವನಿಜೆ–ಸೀತೆ,

೬. ಎಳಗವುಂಗ–ಎಳೆ ಅಡಿಕೆ, ಪನಸು–ಹಲಸು, ಜಂಬು–ಕಂಚಿ ಸಾರಂಗ–ಮುಸಂಬಿ, ಜಂಬೀರ–ಸಣ್ಣನಿಂಬೆ, ಮಾತುಳಂಗ–ಮಾದಳ, ತಿಂತ್ರಿಣಿ–ಹುಣಿಸೆ, ಕಪಿತ್ಥ–ಬೆಳವಲ, ತೊಂಗುವ–ತೂಗಾಡುವ, ಪಿಂಗವು–ಕಡಿಮೆಯಾಗವು, ಇಳೆಗೆ–ಭೂಮಿಗೆ, ಇಕ್ಕೆಲ–ಎರಡೂಬದಿ,.

೭. ಮಂದಾಕಿನಿ–ಗಂಗೆ, ಪೊಡಮಟ್ಟು–ನಮಸ್ಕರಿಸಿ, ಮಿಂದು–ಸ್ನಾನಮಾಡಿ, ಹಳುವು–ಕಾಡು, ಅಸದಳ–ಅಸಾಧ್ಯ, ಕರ್ಕಶ–ಕಠಿಣ.

೮. ಶಕುನಿ–ಪಕ್ಷಿ, ಘೋಷಣ–ಧ್ವನಿ, ವಿಕಿರಿದ–ವ್ಯಾಪಿಸಿದ ಉಪಲ–ಕಲ್ಲು, ಶಶ–ಮೊಲ, ಕಂಟಕ–ಮುಳ್ಳು, ಕೀರ್ಣ–ತುಂಬಿದ, ರುರು–ಎರಳೆ, ನಕುಲ–ಮುಂಗಲಿ, ಸರೀಸೃಪ–ಹಾವು, ದ್ವಿಪ–ಆನೆ, ವಿಷಮಸಂಕುಲ–ತಗ್ಗುದಿನ್ನೆಗಳಿಂದಕೂಡಿದ್ದು, ಬಿಲ–ಪೊದರು, ವೃಕ–ತೋಳ, ಸೂಕರ–ಹಂದಿ, ಚಯ–ಸಮೂಹ,.

೯. ಮಖ–ಯಜ್ಞ, ದಿವ–ಸ್ವರ್ಗ, ಪಯೋನಿಧಿ–ಸಮುದ್ರ, ಸೋಮ–ಚಂದ್ರ, ಸೋಮವಬಳ್ಳಿ; ಅರ್ಕ–ಸೂರ್ಯ, ಎಕ್ಕೆಯಮರ; ಶಿಖಿ–

ಅಗ್ನಿ, ನವಿಲು; ಸಹಸ್ರಾಕ್ಷ-ಇಂದ್ರ, ತಾರೆಯಮರ; ಹರಿ-ವಿಷ್ಣು, ಸಿಂಹ; ಶಿವ-ಈಶ್ವರ, ನರಿ; ಆವಾಸ-ಇರುವೆಡೆ, ಘುರ-ಕಾಳಗ, ಶರ-ಬಾಣ, ನೀರು; ಪುಂಡರೀಕ-ಬಿಳಿಯಕಮಲ, ಹುಲಿ; ವಿದ್ರುಮ-ಹವಳ, ಹಕ್ಕಿಗಳಿಂದ ಕೂಡಿದಮರ; ಋಕ್ಷ-ನಕ್ಷತ್ರ, ಕರಡಿ; ಇಡಿ-ತುಂಬು.

೧೦. ಗಹ್ವರ-ಗವಿ, ದುರ್ಘಟ-ಸೇರಲಸಾಧ್ಯ, ಅಟನ-ಸಂಚಾರ, ಅಸದಳ-ಅಸಾಧ್ಯ, ಜಟೆ-ಋಷಿ, ವಲ್ಕಲ-ನಾರುಮಡಿ, ವಟು-ಬ್ರಹ್ಮಚಾರಿ ಅಳವಳಿ-ಎದೆಗುಂದು.

೧೧. ಸುಹವಿ-ಒಳ್ಳೇಹೋಮದ್ರವ್ಯ, ಕಂಪು-ಸುವಾಸನೆ, ಪೊಗೆದಳೆದ-ಹೊಗೆಯಿಂದಕೂಡಿದ, ಕುಟೀರ-ಗುಡಿಸಲು, ಕಟ್ಟಡವಿ-ದೊಡ್ಡ ಅಡವಿ.

೧೨. ಜೀವೇಶ-ಪತಿ, ವನಜ-ಕಮಲ, ಅರಳ-ಹೂ, ಅರಡಿ-ಭ್ರಮರ, ಜೊಬ್ಬುಳಿ-ಜಾಲಿ, ಮಧು-ಮಕರಂದ, ಪೊದುಕುಳಿ-ಕಪ್ಪು.

೧೩. ಎಂದಕಷ್ಟ-ಹೇಳಿದಕಷ್ಟದಸುದ್ದಿ, ಮೇಣ-ಮತ್ತು, ಉಸಿರ್-ಹೇಳು, ನಿಷ್ಠುರ-ಕಠಿಣ, ಬೆಂದು-ಸಂತಾಪಗೊಂಡು, ಬೇಗುದಿಗೊಂಡನು-ಕಳವಳಿಸಿದನು.

೧೪. ಉಕ್ಕಿದವು-ಸುರಿದವು, ಅಧರೋಷ್ಠ-ಕೆಳದುಟಿ, ಅದಿರೆ-ನಡುಗಲು, ಅಲಗಿಕ್ಕಿ-ಕತ್ತಿಯನ್ನುಹಾಕಿ, ಎಡೆವೀಯದೆ-ಅವಕಾಶವಿಲ್ಲದೆ, ಒಕ್ಕುದು-ಹೊರಟಿತು, ಸೈರಣೆಸಮತೆಗೆಟ್ಟತು-ಶಾಂತಿಯುಕಳೆಯಿತು, ಸೆರೆಬಿಗಿದು-ಕುತ್ತಿಗೆಯುಉಬ್ಬಿ, ಬೆಂಡಾಗಿ-ನಿಸ್ಸತ್ವನಾಗಿ, ಕರ್ಕಶ-ಕಠೋರ, ಒಯ್ಯನೆ-ಮೆಲ್ಲನೆ.

೧೫. ಇನ್ನೆಗಂ-ಈವರೆಗೆ, ಅಪವಾದ-ದೂಷಣೆ, ಆವರಿಸೆ-ವ್ಯಾಪಿಸಲು, ಕುಲೋದ್ವಹಂ-ಕುಲತಿಲಕನು, ಸೀವರಿಸಿ-ಅಸಹ್ಯಪಟ್ಟು, ವಿಪಿನ-ಕಾಡು, ಬಾಷ್ಪಲೋಚನ-ಕಣ್ಣೀರುತುಂಬಿದವನು.

೧೬. ಕವಳಿ–ಬಾಳಿ, ಅಂಗ–ಶರೀರ, ಉಪಾಂಗ–ಅವಯವ, ಕಿವಿದೆರೆ–ಕರ್ಣಪಟಲ, ಪನ್ಮೂರ್ಛಿಸಿ–ಮೂರ್ಛೆಹೋಗಿ, ತಳಿದು–ಚಿಮುಕಿಸಿ, ಸಂಮದು- ಉಂಟಾಯಿತು.

೧೭. ಒಯ್ಯನೆ–ಮೆಲ್ಲನೆ, ಸುಯ್ಯೆಲರ್–ಉಸಿರು, ಸೂಸಿ–ಬಿಟ್ಟು ಕಯ್ವಾರಿ–ಕಯ್ಮುಟ್ಟಿ, ಕೊಯ್ಯ್–ಕೊಡೆ, ಅಳಲ್ದಳ್–ಅತ್ತಳು, ಅಂಭೋಜ–ಕಮಲ.

೧೮. ಪುಟ್ಟೈನೆ–ಅಂಗೀಕಾರಮಾಡನೆ, ನೆಗಳ್ದ-ಹೆಸರಾದ, ಬಾಳ್ಕೆ-ಜೀವನ, ಸಂಚಕಾರ–ಮುಂಗಡದಹಣ, ಕಟ್ಟರಣ್ಯ–ದೊಡ್ಡಅಡವಿ, ನಿರೂಪ–ಅಪ್ಪಣೆ, ಕಣ್ಣಟ್ಟಿಗಟ್ಟನೆ–ಕಣ್ಣಿನಿಂದಮರೆಯಾದನೆ, ಒರಲ್ದಳ್–ಅತ್ತಳು.

೧೯. ಎಂದು–ಯಾವಾಗ್ಗೆ, ರಮಿಸಿದನು–ಕ್ರೀಡಿಸಿದನು, ನವೆದ–ಸೊರಗಿದ, ಒಂದಿದನೆ–ಕೊಂದಲಿಲ್ಲ, ಬೃಂದ–ಸಮೂಹ. ನೆರಪಿ–ಕೂಡಿಸಿ.

೨೦. ಇಡಿದ–ತುಂಬಿದ, ಪಲ್ಮೊರೆದು–ಹಲ್ಲುಕಡಿದು, ಮುರ್ದಿಸು–ಕೊಲ್ಲು, ಬಲ್ಮೆ–ಬಲಾತ್ಕಾರ, ಜನಸ್ಥಾನ-ಪಂಚವಟಿ(ನಾಶಿಕ),ನಲ್ಮೆ–ಪ್ರೀತಿ ವಿಡಿ–ಸುರಿಸು.

೨೧. ತೊಳಪ–ಹೊಳೆಯುವ, ನಾಶಿಕ–ಮೂಗು, ನುಣ್ಗದಪು–ತಿಳುವಾದಗಲ್ಲ, ತುರುಗಿದ-ತುಂಬಿದ, ನಿಡು-ಉದ್ದಾದ, ಪೆರೆನೊಸಲ-ಚಂದ್ರನಂತಿರುವಹಣೆ, ಮಕರಕುಂಡಲ-ಮೊಸಳೆಯಂತಿರುವಕುಂಡಲ, ಚಿಬುಕ-ಗಲ್ಲ; ಅರುಣಾಧರ–ಕೆಂಪುತುಟಿ, ರದನಪಂಕ್ತಿ–ಹಲ್ಲಿನಸಾಲು, ಒಬ್ಬುಳಿ–ರಾಶಿ, ಮೊಣ್ಬೆನು–ಬಿಸಲಿ, ಅಕಟ–ಅಯ್ಯೊ

೨೨. ಭುವನಾಭಿರಾಮ–ಜಗನ್ಮೋಹನ, ಧಾಮ–ಸ್ಥಳ, ಉದ್ದಾಮ–ಶ್ರೇಷ್ಠ, ಜಿತರಾಮ–ರಾಮನನ್ನುಗೆದ್ದವ, ವಾರ್ಧಿ–ಸಮುದ್ರ, ಸೋಮ–ಚಂದ್ರ, ಈಶ್ವರ; ಶ್ಯಾಮ–ನೀಲಬಣ್ಣ.

೨೩. ಇಂತಿಂತು-ಈರೀತಿ, ಆಯತಾಂಬಕಿ-ವಿಶಾಲನೇತ್ರೆ, ಪಾವ ಗಿಡ-ಹಾವುಕಚ್ಚಿದ, ಪಸುಳೆ-ಕೂಸು, ಈಯವಸ್ಥೆ-ಈರೀತಿ.

೨೪. ಬೆಂದೊಡಲು-ಸಂತಾಪದಹೊಟ್ಟೆ, ಬಸಿರದುಂಡುಗ-ಗರ್ಭ ದಕಪ್ಪ, ಬಂದುದಂಕಾಣ್ಬೆ-ಬಂದದ್ದನ್ನುನೋಡುವೆನು, ಮೃಗಾಕ್ಷಿ-ಎರಳೆ ಯಂತೆಕಣ್ಣುಳ್ಳವಳು.

೨೫. ತಳುವಿದೊಡೆ-ತಡೆದರೆ, ನೆರವು-ಸಹಾಯ, ಏಕಾಕಿ-ಒಂಟಿ ಗ, ಕಿಂಕರರ್-ಸೇವಕರು.

೨೬. ಏಗೈವರು-ಏನುಮಾಡುವರು, ಮರುಳಾಟ-ಹುಚ್ಚುತನ, ಭೀರು-ಹೆದರುವವಳು, ಒರಲ್ದೊಡೆ-ಶೋಕಿಸಿದರೆ.

೨೭. ಮಿಡಿಸು-ಸುರಿಸಿ, ಆರ್ತೆ-ದೀನಳು, ವಿಪಿನ-ಅರಣ್ಯ. ಅಭಿ ಮಾನಿಗಳ್ಗೆ-ದೇವತೆಗಳಿಗೆ.

೨೮. ತೃಣ-ಹುಲ್ಲು, ಗುಲ್ಮ-ಪೊದರು, ಕಾವುದು-ರಕ್ಷಿಸುವದು.

೨೯. ಮಾಳ್ಕೆ-ಮಾಡುವದು, ಇಬ್ಬಗೆ-ಎರಡುಭಾಗ, ಬಲವಂದು-ಪ್ರ ದಕ್ಷಿಣೆಯನ್ನುಮಾಡಿ, ನೀಳ್ಕುಳಿಗೊಳಲ್ಕೆ-ಸೆಳೆಯಲು, ದೂಳ್-ಹುಡಿ, ಕಾ ಯ-ದೇಹ, ಪತ್ತಿ-ಹತ್ತಿ, ತೂಗುಯ್ಯಲೆ-ಜೋಕಾಲಿ.

೩೦. ನಡೆಗೊಳಲ್-ನಡೆಯಲು, ಚೀರು-ಒದರು, ಕಡಲಿಡುವ-ಹ ರಿಯುವ, ಆಳ್-ಮುಳುಗು, ಪುಡಿ-ಹುಡಿ, ಬಸವಳಿ-ಸ್ವಾಧೀನತಪ್ಪು, ಅವ ರಜ-ತಮ್ಮ, ಪೊಡೆಮರಳ್ವ-ಹಿಂದಕ್ಕೆತಿರುಗುವನು, ಬಟ್ಟೆ-ದಾರಿ, ದಿಟ್ಟಿ- ದೃಷ್ಟಿ.

೩೧. ಬಿಚ್ಚುವಂತೆ-ಅಗಲುವಹಾಗೆ, ಅಮರನದಿ-ಗಂಗೆ, ದುಃಖಾ ರ್ತೆ-ಶೋಕಪೀಡಿತ, ಮಸುಳಲು-ಮರೆಯಾಗಲು, ಒರಲ್ದು-ಚೀರಿ, ಒಡ ಗು-ಬೀಳು.

೩೨. ಮುದುರ್ದುಡಿಗಿ–ಶರೀರವನ್ನು ಕುಗ್ಗಿಸಿಕೊಂಡು, ಜೋಲ್ದು–ಮುಖವನ್ನು ಇಳಿಬಿಟ್ಟು, ನಿಜವೈರ–ಸ್ವಾಭಾವಿಕವೈರತ್ವ. ಸೊರಗು–ಒಣಗು.

೩೩. ಬೆರೆ–ಕೂಡು; ಕೋಕಿ–ಚಕ್ರವಾಕ; ಪಿಕ–ಕೋಗಿಲೆ; ನಲಿ–ಸಂತೋಷಿಸು; ನೆರೆ–ಕೂಡು; ಒಲೆ–ತೂಗಾಡು; ಮೆಚ್ಚು; ಸಿಂಗ–ಸಿಂಹ;

೩೪. ಪಾಸಿದುವು–ಹಾಸಿದುವು; ಕರಿ–ಹೆಣ್ಣಾನೆ; ಎಳೆದಳಿರ–ಎಳೆ ಚಿಗುರು; ತಲ್ಪ–ಹಾಸಿಗೆ; ಸೂಸಿದವು–ಚಿಮುಕಿಸಿದವು; ಸಾರಸ–ಹಂಸ; ತೋರ್ದು–ತೋರಿಸಿ; ಅಂಬು–ನೀರು; ಆಗಸ–ಆಕಾಶ; ಓಸರಿಸದೆ–ಓರೆ ಮಾಡದೆ; ಆಸೆ–ಒತ್ತಾಸೆ.

೩೫. ಅಲರ್ದ–ಅರಳಿದ; ಅರವಿಂದ–ತಾವರೆ; ತವಿಸು–ಪರಿಹರಿಸು ತರಹರ–ಕಷ್ಟಸಹನ; ಸುಖಸ್ಪರುಶ–ಹಿತಕರ.

೩೬. ಪಥ–ದಾರಿ, ಚೇತರಿಸಿ–ಎಚ್ಚತ್ತು, ಶಿಥಿಲ–ಸಡಿಲು; ಇಡಿದ–ತುಂಬಿದ; ಮುಡಿ–ಹೆಳಲು; ವಿಕೃತಿ–ವಿಕಾರ; ಕಟ್ಟಡವಿ–ಘೋರಾರಣ್ಯ, ವ್ಯಥಿಸು–ಕಷ್ಟಪಡು.

೩೭. ಕೇಣ–ಹೊಟ್ಟೆಕಿಚ್ಚು, ಆತ್ಮಘಾತಕ–ಆತ್ಮಹತ್ಯ. ಭ್ರೂಣ–ಉದರದಲ್ಲಿರುವಶಿಶು; ಎಗ್ಗೈವೆ–ಏನುಮಾಡುವೆನು; ಏಣಾಕ್ಷಿ–ಎರಳೆಯಕಣ್ಣಿನಂತೆಕಣ್ಣುಳ್ಳವಳು; ಉಪಲಕಂಟಕ–ಕಲ್ಲು, ಮುಳ್ಳು; ಶ್ರೇಣಿ–ಸಾಲು; ಶೋಣಿತ–ರಕ್ತ; ಪೊನಲ್ಪರಿಯಲ್–ಪ್ರವಾಹಗೊಂಡುಹರಿಯಲು; ಪೆಣ್ಗೊಡಲ್ವಿಡಿ–ಹೆಣ್ಣಾಗಿಹುಟ್ಟು.

೩೮. ಅನ್ನೆಗಂ–ಅಷ್ಟರಲ್ಲಿ; ಮಖ–ಯಜ್ಞ: ಯೂಪ–ಯಜ್ಞದಕಂಬ ಅರಸು–ಹುಡುಕು, ಸನ್ನುತ–ಹೆಸರಾದ; ತಪೋಧನ–ಮುನಿ, ಪುಗಲ್–ಪ್ರವೇಶಿಸಲು, ಬನ್ನ–ಕಷ್ಟ, ಬಗೆಗೆಟ್ಟು–ಧೈರ್ಯಗುಂದಿ, ಪಾಡಳಿದು–ರೀತಿಗೆಟ್ಟು, ನವೆದ–ಸೊರಗಿದ, ಕಾಂತಾರ–ಅಡವಿ, ಸನ್ನ–ಕಡಿಮೆಯಾದ.

೩೯. ವನಾಂತರ–ಅರಣ್ಯದನಡುವೆ; ಆರೈವೆ–ವಿಚಾರಿಸುವೆನ ; ಕುರುಪು–ಗುರುತು; ಗಹನ–ಕಾಡು. ಭೀರು–ಹೆದರುವವನು; ಭೂರಿ–ಬಹಳ

೪೦. ಒತ್ತರಿಸು–ಹೆಚ್ಚಾಗು; ಶೋಕ–ದುಃಖ; ಇಮ್ಮಡಿಸು–ಎರಡುಪಟ್ಟಾಗು; ಪರಿಯುಪೇಕ್ಷೊಡೆ–ತ್ಯಾಗ ಮಾಡಬೇಕೆಂದರೆ; ಏವೆಂ–ಏನುಮಾಡಲಿ.

೪೧. ಪುತ್ರಯುಗ-ಅವಳಿಮಕ್ಕಳು; ಭಾವಿಸು-ಆಲೋಚಿಸು; ಅನ್ಯರು-ಬೇರೆಯುವರು; ಓವಿ-ಸಂರಕ್ಷಿಸಿ.

೪೨. ಕಟ್ಟಿತು-ಕಟ್ಟಲ್ಪಟ್ಟಿತು; ಪರ್ಣಶಾಲೆ-ಎಲೆಮನೆ; ಶತಪತ್ರ-ಕಮಲ; ತಳೆದು-ಹೊಂದಿ, ಆರೈಕೆ-ಸಂರಕ್ಷಣೆ, ದೃಢ-ನಿಶ್ಚಯ, ಚರಿತ್ರ-ನಡತೆ; ವಿಪರೀತ-ವಿರುದ್ಧ.

೪೩. ಸಂಘಾತ-ಸಮೂಹ; ದ್ರುಮ-ಮರ; ವ್ರಾತ-ಗುಂಪು; ಪೂಗೊಳ-ಹೂಗಳಸರೋವರ; ವಿಕಾಸ-ಅರಳು; ಅಸರ-ಆಯಾಸ; ಜಂಜಡ-ತೊಂದರೆ; ಪದುಳ-ಸುಖ.

೪೪. ವಟು-ಬ್ರಹ್ಮಚಾರಿ, ಎಡೆಯಾಡಿ-ತಿರುಗಾಡಿ; ಪರಿಚಯ:-ಸೇವೆ; ಇನಿದು-ಸೀ; ತನತನಗೆ-ಪ್ರತಿಯೊಬ್ಬರು; ತಾಪಸೋತ್ತಮರ್-ಮುನಿಶ್ರೇಷ್ಠರು; ಸಾದರ-ಆದರ, ರಾಜ್ಯಶ್ರೀ-ರಾಜ್ಯಲಕ್ಷ್ಮಿ.

೪೫. ಅವಧಿ-ಕಾಲ, ಶುಭಲಗ್ನ-ಉತ್ತಮಮುಹೂರ್ತ, ಅವಳಿ-ಜೋಡು, ವಿದಗ್ಧ-ಬುದ್ಧಿವಂತೆಯರು, ಸೂತಿಕಾಗೃಹ-ಬಾಣಂತಿಮನೆ. ಕುಶ-ದರ್ಭೆ; ನೀರು; ಲವ-ಹನಿ; ಸೇಚನ-ಚಿಮ್ಮಿಡಿಸು; ಅರ್ಭಕ-ಕೂಸು,

೪೬. ಪ್ರಸನ್ನತೆ-ಸ್ವಚ್ಛ, ಉಡುವಿಸರ-ನಕ್ಷತ್ರಗಳಗುಂಪು; ಕಂಪಿಡಿದ-ಸುವಾಸನೆಯಿಂದಕೂಡಿದ; ಪಸರಿಸಿತು-ವ್ಯಾಪಿಸಿತು, ತವೆ-ಚನ್ನಾಗಿ; ಪ್ರದಕ್ಷಿಣೆ-ಬಲದಸುತ್ತು; ವಸುಧಿ-ಭೂಮಿ; ತಿಳಿದು-ತಿಳಿಯಾಗಿ; ಪರಿದವು-ಹರಿದವು; ಒಸಗೆ-ಮಂಗಳ.

೪೭. ಬಾಲದೊಡಿಗೆ-ಮಕ್ಕಳವಸ್ತ್ರ; ಕೊಡುವಂ-ಕೊಡುವನು; ಮಡಿಲು:-ಪಕ್ಕ; ಸಮಾಧಿ-ಧ್ಯಾನ; ಬಗೆಯದೆ-ಲೆಕ್ಕಿಸದೆ; ಅಕ್ಕರ-ಪ್ರೀತಿ.

೪೮. ಬೆಳವಿಗೆಯ-ಬೆಳೆಯುವ; ನವೆವ-ಕ್ಷೀಣಿಸುವ; ಕರ್ಕಶ-ಕಠಿಣ; ಸಂಭೂತಿ-ಮಗಳು, ವಿಶದ-ನಿರ್ಮಲ, ಓವು-ಕಾಪಾಡು.

೪೯. ಕವಲ್ತುದು-ಇಬ್ಭಾಗವಾಯಿತು; ಗೆಲ್ವದೆಸೆ-ವಿಜಯಲಕ್ಷ್ಮಿ; ಅಡರ್-ಹತ್ತು; ಮಡಲ್-ಹಬ್ಬುವಿಕೆ; ಪಸುಗೆ-ಪಾಲು, ಸಲ್ವ-ಒಪ್ಪುವ; ಕೋಡು-ಕೊಂಬು; ಬಲ್ಪನಲ್-ದೊಡ್ಡಪ್ರವಾಹ; ಸವಡಿ-ಇಬ್ಬಗೆ; ಸೊಲ್ಲಿಪದಲ್-ಹೇಳಲು.

೫೦. ಪೀರ್ವ-ಹೀರುವ; ಚೀರ್ವ-ಅಳುವ; ನೆವ-ಕಾರಣ; ಪಟ್ಟಿರಿಸೆ-ಮಲಗಿಸಲು; ಮೊಳೆವಲ್-ಮೊಳಕೆಯುಹಲ್ಲು; ಒಗೆ-ಸುರಿಯಲು; ದಟ್ಟಡಿ-ತಪ್ಪುಹೆಜ್ಜೆ; ಪರಿವ-ಓಡುವ; ಬಟ್ಟೆ-ದಾರಿ; ಒರಗು-ಮಲಗು; ನೆಟ್ಟನೆ-ಸೊಗಸಾಗಿ.

೫೧. ಪೀರ್ವುದಂ-ಹೀರುವದನ್ನು; ತಣಿದು-ತೃಪ್ತಿಹೊಂದಿ;ಓರಗೆ-ಸಮಾನ, ಪರಿವಿಡಿ-ಕ್ರಮವಾಗಿ, ಚೌಲ-ಜುಟ್ಟುಬಿಡಿಸುವದು; ಕುಶಲವರ್ಧನರ್-ಕ್ಷೇಮವನ್ನುಹೆಚ್ಚಿಸುವವರು.

೫೨. ಮಾಧವ-ಲಕ್ಷ್ಮೀಪತಿ; ಕಾಮಜನಕ-ಮನ್ಮಥನತಂದೆ; ಕಾಮನೀಯ-ಮನೋಹರ; ತಾಳ್ದೊಗೆದ-ಕೂಡಿಕೊಂಡಿರುವ; ಅಭಿವಂದಿಸು-ಸ್ತುತಿಸು; ಪಡಿಯಿಡಲ್-ಹೋಲಿಸಲು; ಪುನರುಕ್ತ-ತಿರುತಿರುಗಿಹೇಳುವದು.

೫೩. ದ್ವಾದಶಾಬ್ದ-ಹನ್ನೆರಡುವರ್ಷ; ವೇದೋಕ್ತ-ವೇದದಲ್ಲಿಹೇಳಿದಂತೆ; ಭೂದೇವ-ಬ್ರಾಹ್ಮಣ; ನಿಕರ-ಸಮುದಾಯ; ತರುಣಾದಿತ್ಯ-ಬಾಲಸೂರ್ಯ; ಸನ್ನಿಭರ್-ಸಮಾನರು; ತೊಳಗಿದರ್-ಶೋಭಿಸಿದರು.

೫೪. ವಿಧಿ-ವಿಧಾನ; ನಿಗಮ-ವೇದ, ಉರ್ವ-ದೊಡ್ಡ, ಬಗೆ-ರೀತಿ ಉದಿತ-ಹೇಳಲ್ಪಟ್ಟ, ಉರ್ವೀಶನೀತಿ-ರಾಜನೀತಿ. ಸಾಂಗೋಪಾಂಗ-ಸಂಪೂರ್ಣ, ಬರಿಸಿ-ಕಲಿಸಿ, ತರ್ವಾಯ-ಆಮೇಲೆ, ಧನುರ್ವೇದ-ಬಿಲ್ಲುವಿದ್ಯೆ, ಶಿಕ್ಷೈದು-ಕಲಿಸಿ, ಪಾಡುವಂತೆ-ಹಾಡುವಹಾಗೆ.

೫೫ ತರುಣರ-ಯೌವನಸ್ಥರು, ಮೇಳಾಪ-ಹೊಂದಿಕೆ, ಆಲಾಪ-ಹಾಡುವಿಕೆ, ಸಂಕೀರ್ಣ-ಮಿಶ್ರ, ಸಾಳಂಗ-ರಾಗ, ಲಯ-ತಾಳ, ಅತಿಶಯ-ಹೆಚ್ಚಳ, ನಿಕೇತನ-ಮನೆ, ಅನುದಿನ-ಯಾವಾಗಲು.